Government should neither encourage nor obstruct. I should take a neutral attitude as there are differences of opinion in this matter. It is better that the Government and the Legislature seriously consider this problem and say once for all that the Government and this Legislature shall not have anything to do with these institutions. We will leave it to the devotees of those institutions to do whatever they can for the survival of those institutions or for the furtherance of the cause of those institutions. Hence this *tasdik* allowance should not be given to these institutions. Sri Ramaiya laboriously spoke on the existence of God, of the good things that gods or the thousands of gods have conferred on humanity. But he forgot what Uncle Sam did in the name of God in the destruction of Nagasaki and Hiroshima in 1945. Even Hitler called to his aid the Divine Power. And also, our Ministers, whenever they fail to argue a case, when they cannot plead that what they have done is up to the point, up to the mark that was expected of them, they will invite this easy God to come to their rescue.

Sri Kadidal MANJAPPA.—I have never invoked Him.

Sri Mulka GOVINDA REDDY.—There are some, I said, who invoke the aid of God. In this scientific age, in this age of atomic power and hydrogen bomb, our bent of mind should be more scientific. We should know the cause and effect of what we say and what we worship. If, in spite of my argument that tasdik allowance should not be given, you decide to give tasdik allowance, the way in which you decide should be more appropriate and should be more proper. The way in which you want to arrive at a decision regarding the basic annual sum is not proper. The determination and payment of compensation is dealt with in Chapter 3 in the first four sections.

> "14. The compensation payable in respect of an inam shall be determined in accordance with the provisions of this Chapter.
>
> * * *
>
> 17. The basic annual sum of an inam shall be the aggregate of the sums specified below, less the deductions specified in section 18 :—
>
> (i) the whole of the average net annual income derived by the inamdar during a period of five years immediately preceding the date of vesting from lands in respect of which any person is entitled to be registered under sections 4, 5 and 7 ;"

Sri Puttaswamy has explained how adversely this clause will affect the Exchequer of the State. The period you are going to take into consideration will be five years immediately preceding the date of vesting of lands in respect of which any person is entitled to be registered under sections 4, 5 and 7. If this Bill becomes an Act and if the Government notifies the date of vesting, the period will be five years from the date of passing of the Bill and the date of notification, *i.e.*, for the five years, from 1950 to 1955. As he rightly put it, the price of agricultural produce or any income derived by the inamdar or the agriculturist by his agricultural avocation was much more, was not normal. In a way, I should say, it was abnormal. If the Government were to agree to pay the average net annual income derived by the inamdar during this five-year period of prosperity, then they will be obliged to pay much more during a period when the agricultural prices fall much below the present rates.

To-day, we are seeing the alarming fall in agricultural prices and this fall in price will continue for some time more. So, in order to avoid any burden on the exchequer, the five-year period should be counted between 1935-40, or 20 years immediately preceding the date of vesting; then the burden will be equitable. So, in clause 17 (1) (ii), we may say "20 years" instead of "5 years." Proviso to clause (1) (ii) says :—

"Provided that—

(a) the income from sandalwood or any other reserved forest produce shall not be included in the annual income from forests unless the right thereto was expressly conferred on the inamdar by a competent authority;"

For whatever reasons those rights might have been conferred on the inamdars by previous concerned authorities, those rights should not be allowed to be exercised and should not be recognised now. If those rights were exercised by these inamdars, the Government should not allow them now to exercise that right by way of giving allowance and computing income that the inamdars were getting from these sources.

Chapter IV relates to provisions applicable to tenants under Government. I cannot really understand why the Government have introduced these provisions. Yesterday, the Minister was telling us that instead of the inamdar, the Government will collect the rent from the tenants-at-will. Why should the Government step into the shoes of the inamdar? When we decided that the tiller of the land should become the occupant or the owner of the land, why should these tenants be deprived of that right? Though they may say that there would be option for them either to remain under Government and pay the rent to the Government as they used to pay to the inamdars as before or they may become occupants of these lands under certain conditions, I for one feel that there should be no option about it and these occupancy rights must be conferred on these tenants-at-will even though they are not permanent tenants or kadim tenants. Clause 22 says :—

"The provisions of this Chapter shall apply to the tenants continued under Section 6."

I cannot understand this provision. Here the Government want to extract or exploit these tenants-at-will just because they are tenants-at-will. They will be as worse as the inamdars; so, if the tenants-at-will were to be given any benefit and if the Government are serious of helping them, one half of the main crop should not be prescribed for being paid to the Government; one-half should be reduced to one-sixth as is prevailing in other parts of India.

Sri L. SIDDAPPA (Channagiri).—He was previously paying that to the inamdar and the limit is that it should not exceed in any event half the main crop.

Sri Mulka GOVINDA REDDY.—My contention is that these inamdars were teasing the raiyats. They were sucking the blood of these tenants-at-will and the Government should not copy the inamdars in taking the same right.

Sri S. SRINIVASA IYENGAR (T.-Narasipur).—May I suggest that in this Bill, 'Inamdar' means 'Institution'?

Sri Mulka GOVINDA REDDY.—It does not matter whether the inamdar is an institution or a human being. If a non-existing God were to do it, that will be much more wrong. The termination of the tenancy provided in Clause 25(1) is rather very hard. If he fails to pay rent of such land for any year, the provision that he should be deprived of his tenancy rights and the tenancy should be terminated, would work very hard and that would be harmful to the interests of these tenants. Instead of one year, if it is put as two years, then some relief will have been given to the tenants. In some particular year, he may have to perform the marriage of his son or daughter and as such he may not be in a position to pay to Government. If, for a satisfactory reason, he is not in a position to pay rent and the Government were to terminate the tenancy on that account, then these tenants-at-will be put to a very great hardship. Clause 26 refers to the procedure for eviction and recovery of rent. It says :—

"26 (1) If the Assistant Commissioner, after giving an opportunity to the tenant to show cause why an eviction order should not be made against him, is satisfied that the tenant is liable to eviction under the provisions of Section

(SRI MULKA GOVINDA REDDY.)

25, he may by order in writing, served on the tenant, direct him to quit the land within one month from the date of the service of the order."

This period of one month will also work as a hardship on the tenants. If it is three months, then it will be giving a reasonable time to the tenants to borrow money from somebody and to see that rent is paid to the Government. Section 27 refers to the conditions as to when a tenant could be registered as occupant of the land. Section 27 says:—

"A tenant, on payment to the Government of—

(i) a sum equal to thirty-three and one-third times the difference between the rent and the land revenue of the land held by him as tenant; or

(ii) a sum equal to twenty-five times the land revenue of such land. . . ."

There is considerable confusion in the minds of the Government when they say that a sum equal to 33 1/3 times the difference between the rent and the land reveuue or 25 (twenty-five) times the land revenue, whichever is more. I do not know whether Sri Srinivasa Iyengar made out the calculations and told the Assembly yesterday in this regard. He gave me the calculations according to which if rent payable for one acre is eight pallas of paddy, it will amount to Rs. 160 and if the land revenue to be paid for that one acre is Rs. 10, the difference will be Rs. 150 and if that difference is multiplied by 33 1/3 times, then it will be nearly Rs. 5,000 per acre.

Sri Kadidal MANJAPPA.—Please ascertain from him the value of the land in his place.

Sri Mulka GOVINDA REDDY.—It will be Rs. 5,000 per acre. If the land revenue is Rs. 10 per acre, then if it is multiplied by 25 times, it will be Rs. 250. What I want to know is why should there be this abnormal disparity between clauses (i) and (ii), Rs. 5,000 or Rs. 250? I can understand if the disparity is about Rs. 100, whichever is more, or whichever is less. There is some meaning in saying that. But this is an abnormal difference or disparity between the two calculations. I was thinking that thirty-three and one-third times the difference between the rent and the land revenue of the land would work as a great hardship on the tenant and that should be reduced to the minimum. With regard to "25 times the land revenue of such land", I feel what concessions you have given to the permanent tenants should also be given to the tenants-at-will. Instead of "25 times," if the words "20 times" are put, and if the words "whichever is more" are substituted by the words "whichever is less," then it will help the tenant to a great extent. Section 29 refers to appeal from orders under Sections 8, 9 and 20 and references to the prescribed authority. Under Section 26 you have stated that if the Assistant Commissioner decides that the tenancy should be terminated, the tenancy will be terminated within one month from the date of that decision and its service. So, within that one month he has to prefer an appeal. I cannot really understand, Sir, why you are rushing through this procedure for eviction; you will not be giving reasonable time and opportunity for the tenant to appeal against the orders of the Assistant Commissioner to the Deputy Commissioner. Finally, Sir, we have accepted that the tiller of the soil should be made the owner of the land. Sri Deveraj Urs was making a very pertinent remark yesterday that the Government should have ascertained as to what extent the benefits under this Bill will be conferred on the landless people. It may be possible that the landholders who were holding large extents of land might get some benefit under this Bill. So, it is but right that the landless should be given land whether under this Bill or under the Bill relating to ceiling limit on lands that the Government propose to bring. So, I earnestly urge upon the Government to bring a legislation where the

maximum and minimum ceiling limits would be fixed regarding the holding of lands. With these few words, I support the Bill. Thank you.

2-30 P.M.

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಈ ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಬಿಲ್ಲನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ನಾನು ತಿಳಿಸಲು ಬಯಸುತ್ತೇನೆ. ಸಾಧಾರಣವಾಗಿ, ಈ ಬಿಲ್ಲಿನಲ್ಲಿ ಕೊಟ್ಟಿರತಕ್ಕ ವಿಚಾರಗಳನ್ನು ಒಂದೊಂದಾಗಿ ಪರಿಶೀಲಿಸೋಣ. ಈಗಾಗಲೇ ನನ್ನ ಅನೇಕ ಮಿತ್ರರು ಇದನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದರೂ ಕೆಲವು ವಿಚಾರಗಳನ್ನು ನಾನು ಇಲ್ಲಿ ಹೇಳಲೇಬೇಕಾಗಿದೆ.

ಈ ಹೊತ್ತು, ಧಾರ್ಮಿಕ ಸಂಸ್ಥೆಗಳಲ್ಲಿ ದೊಡ್ಡ ಸಂಸ್ಥೆಗಳೂ ಇವೆ ; ಸಣ್ಣ ಸಂಸ್ಥೆಗಳೂ ಇವೆ ; ಜೊತೆಗೆ ಸಣ್ಣ ಮತ್ತು ದೊಡ್ಡ ದೇವಸ್ಥಾನಗಳೂ ಇವೆ. ಇವೆಲ್ಲವನ್ನೂ ನೋಡುವುದಾದರೆ, ಪ್ರತಿಯೊಂದಕ್ಕೂ ಸಾಮಾನ್ಯವಾಗಿ ಧರ್ಮಬುದ್ಧಿಯುಳ್ಳವರು ತಾವು ಸಂಪಾದಿಸಿದ ಹಣದಿಂದ ಜಮೀನುಗಳನ್ನು ತೆಗೆದು ಕೊಟ್ಟಿದ್ದಾರೆ. ಕೆಲವಕ್ಕೆ ಮಹಾರಾಜರುಗಳು ತೆಗೆದು ಕೊಟ್ಟಿದ್ದಾರೆ. ಅಲ್ಲದೆ, ಈ ದೇವಸ್ಥಾನಗಳು ಇನ್ನೂ ಅಭಿವೃದ್ಧಿಯಾಗಲಿ ಎಂದು ಅನೇಕ ಭಕ್ತರು ಬಂದು ಕಾಣಿಕೆಗಳನ್ನು ಸಲ್ಲಿಸಿ ಧಾನಧರ್ಮಗಳನ್ನು ಮಾಡಿದ್ದಾರೆ. ಹೀಗೆ ಈ ಸಂಸ್ಥೆಗಳಿಗೆ ಹಣ ಅನೇಕ ರೀತಿಯಲ್ಲಿ ಬರುತ್ತಿರುತ್ತದೆ.

ಇಷ್ಟಾದರೂ, ಈ ದೇವಸ್ಥಾನಗಳ ಜಮೀನನ್ನು ಯಾರು ಭೂಮಿಯನ್ನು ಉಳುತ್ತಾನೋ ಅವನಿಗೇ ಒಡೆತನವಿರುವಂತೆ ಮಾಡಬೇಕೆಂದು ನಾವು ಎಷ್ಟೋ ದಿವಸದಿಂದ ಹೇಳುತ್ತಿದ್ದರೂ ಇದುವರೆಗೂ ಮಾಡಿರಲಿಲ್ಲ. ಈಗ ಮೊದಲನೆಯದಾಗಿ ಆ ರೀತಿ ತಲೆಮಾರಿನಿಂದ ಉತ್ತು ಮಾಡುತ್ತಿದ್ದವನಿಗೆ ಜಮೀನನ್ನು ಕೊಡಬೇಕೆಂದು ಹೇಳಿ ದೇವಸ್ಥಾನಕ್ಕೆ ಬರತಕ್ಕ ಆದಾಯಕ್ಕೆ ತಕ್ಕ ಏರ್ಪಾಡು ಮಾಡಿದ್ದಾರೆ. ಈ ವ್ಯವಸ್ಥೆ ಮಾಡಿರುವುದರಲ್ಲಿ ಒಂದು ವ್ಯತ್ಯಾಸ ಮಾಡಿದ್ದಾರೆ. ಏನೆಂದರೆ, ದೇವಸ್ಥಾನಕ್ಕೆ ಎಷ್ಟು ಆದಾಯ ಬರುತ್ತಿತ್ತೋ ಅಷ್ಟನ್ನು ಸಾರೋದ್ಧಾರವಾಗಿ ಸರ್ಕಾರ ತಸ್ತೀಕ್ ರೂಪದಲ್ಲಿ ಕೊಡಬೇಕೆಂದು ಹೇಳಿದ್ದಾರೆ. ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇದರಂತೆ ಒಪ್ಪಿ ಕೊಡುತ್ತಾ ಹೋದರೆ ದೇಶದಮೇಲೆ ಒಂದು ಹೆಚ್ಚಿನ ಹೊರೆ ಬಂದಂತಾಗುತ್ತದೆ. ಅನೇಕ ಮಿತ್ರರು ಆಗಲೇ ಹೇಳಿದ್ದಾರೆ. ಪ್ರತಿವರ್ಷ ಹೀಗೆ ದುಡ್ಡನ್ನು ಧರ್ಮ ಸಂಸ್ಥೆಗಳಿಗೆ ಕೊಡಬೇಕೆಂದರೆ ಸರ್ಕಾರದ ದುಡ್ಡೆಲ್ಲಾ ಕೊನೆಗೆ ದೇವಸ್ಥಾನಗಳಿಗೆ, ಮಠಗಳಿಗೆ ಕೊಡಬೇಕಾಗಿ ಬರುತ್ತದೋ ಎನಿಸುತ್ತದೆ. ಇದು ಸರಿಯಾದದ್ದಲ್ಲ. ಸರ್ಕಾರದಮೇಲೆ ಯಾವ ಭಾರವೂ ಬೀಳಕೂಡದು. ಧರ್ಮಸಂಸ್ಥೆ ಎಂದಮೇಲೆ ಅವರು ಅದರ ಕಷ್ಟನಷ್ಟಗಳನ್ನು ಅನುಭವಿಸಲೇಬೇಕು. ಅವಕ್ಕೆ ಶಿಷ್ಯರು, ಭಕ್ತರು ಇರುತ್ತಾರೆ. ಅವರುಗಳು ಆಯಾ ಧರ್ಮ ಸಂಸ್ಥೆಗಳ ಖರ್ಚನ್ನು ನೋಡಿಕೊಳ್ಳುವ ಭಾರ ವಹಿಸತಕ್ಕದ್ದು ಯುಕ್ತ. ಅದನ್ನು ದೇಶದಮೇಲೆ ಹೊರಿಸುವುದು ನ್ಯಾಯವಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಉಳುವವನೇ ಭೂಮಿಯ ಒಡೆಯ ಎಂದಮೇಲೆ ಪರ್ಮನೆಂಟ್ ಟೆನೆಂಟರಿಗೂ, ಹಂಗಾಮಿ ರೈತರಿಗೂ ಜಮೀನು ಕೊಡತಕ್ಕ ನೀತಿ ಬದಲಾವಣೆಯಾಗಿದೆ. ಇದರಲ್ಲಿ ಅವರಿಂದ ಇಷ್ಟು ಹಣವನ್ನು ಪಡೆದುಕೊಂಡು ಜಮೀನು ಕೊಡಬೇಕೆಂದು ಒಂದು ನಿಯಾಮಕ ಮಾಡಿದ್ದಾರೆ. ಇದು ಸರಿಯಾದುದ್ದಲ್ಲ. ಏಕೆಂದರೆ ದೇವರ ಜಮೀನನ್ನು, ಮಠದ ಜಮೀನನ್ನು ಎಷ್ಟು ದಿವಸ ಸಾಗುವಳಿ ಮಾಡುತ್ತಿದ್ದರೂ ಆ ರೈತ ಹಂಗಾಮಿಯಾಗಿಯೇ ಇರುತ್ತಾನೆ. ಆತನು ಪರ್ಮನೆಂಟ್ ಟೆನೆಂಟ್ ಆಗುವುದಕ್ಕೆ ಅವಕಾಶವೇ ಇಲ್ಲ. ಅಲ್ಲದೆ, ಈ ಜಮೀನು ವಿಷಯದಲ್ಲಿ ಗುತ್ತಿಗೆ ಮುಂತಾದುವುಗಳನ್ನು ನೋಡಿಕೊಳ್ಳುವ ಏಜೆಂಟರುಗಳೆಂದು ಬೇರೆ ಇರುತ್ತಾರೆ. ಅವರು ಹೀಗೆ ಮಧ್ಯವರ್ತಿಯಾಗಿದ್ದು 'ಆ ಜಮೀನುಗಳೆಲ್ಲಾ ನನ್ನದು' ಎಂದು ಹೇಳಿ ಆ ಜಮೀನುಗಳನ್ನು ಹೊಡೆಯುವುದಕ್ಕೆ ಪ್ರಯತ್ನ ಪಡುತ್ತಾರೆ. ಆದ್ದರಿಂದ, ಯಾರು ಜಮೀನು ನಿಜವಾಗಿ ಉಳುತ್ತಾನೆ, ಯಾರು ರೂಢಿಸುತ್ತಾನೆ ಎಂಬುದನ್ನು ನಿರ್ಧರಮಾಡುವುದಕ್ಕೆ ಒಂದು ಪ್ರಾವಿಸೋವನ್ನು ಇದರಲ್ಲಿ ಅಳವಡಿಸುವುದು ಯುಕ್ತವೆಂದು ಹೇಳುತ್ತೇನೆ. ಇದರಲ್ಲಿ ಈಗ ಅದಕ್ಕೆ ಅವಕಾಶವಿರುವಂತೆ ಕಾಣಬರುವುದಿಲ್ಲ.

ಶೃಂಗೇರಿ ಜಹಗೀರಿಯ ವಿಚಾರದಲ್ಲಿ ಅನೇಕರು ಮಾತನಾಡಿದ್ದಾರೆ. ಅಲ್ಲಿ ಯಾರು ಜಮೀನಿನ ಒಡೆಯರು ಎಂದು ಹೇಳುವುದು ಕಷ್ಟ. ಬೊಂಬಾಯಿನಲ್ಲಿರತಕ್ಕವನು, ಮದ್ರಾಸಿನಲ್ಲಿರತಕ್ಕವನು ಯಾರೋ ದೇವರ ಜಮೀನನ್ನು ಲಪಟಾಯಿಸಿಕೊಂಡು ದೊಡ್ಡ ಮನುಷ್ಯನಾಗಿರುತ್ತಾನೆ. ಅವರ ವಿಚಾರ ಈಗ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಹೀಗೆ ಮಧ್ಯವರ್ತಿಗಳಿಗೆ ಜಮೀನು ಹೋಗುವುದಕ್ಕೆ ಅವಕಾಶವಿಲ್ಲದಂತೆ ಯಾರು ನಿಜವಾಗಿಯೂ ಜಮೀನನ್ನು ಉಳುತ್ತಿದ್ದಾನೋ, ಯಾರು ರೂಢಿಸುತ್ತಿದ್ದಾನೋ ಅವನಿಗೇ ಹೋಗುವಂತೆ ಮಾಡಲು ತಕ್ಕ ತಿದ್ದುಪಡಿಯನ್ನು ಈ ಮಸೂದೆಯಲ್ಲಿ ಅಳವಡಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಸಾಮಾನ್ಯವಾಗಿ ಎಲ್ಲಾ ಸಂದರ್ಭದಲ್ಲೂ ಇಂಥ ಬಿಲ್ಲನ್ನು ಮಾಡುವಾಗ ದೇಶದಲ್ಲಿರತಕ್ಕ ಜನಗಳ ಅಭಿಪ್ರಾಯವನ್ನು ಕ್ರೋಡೀಕರಿಸಿರುತ್ತೀರಿ ಎಂದು ತಿಳಿದಿದ್ದೇನೆ. ಈ ಬಿಲ್ಲು 1951 ರಲ್ಲಿ ಪ್ರಾರಂಭವಾಗಿದ್ದು ಈಗ 1954 ನೆಯ ಇಸವಿ ಕಳೆದು 1955 ನೆಯ ಇಸವಿಯಲ್ಲಿದ್ದೇವೆ. ಈ ಸಾಧಾರಣವಾದಂಥ ಒಂದು ಬಿಲ್ಲಿಗೆ ಇಷ್ಟು ದಿವಸ ತೆಗೆದುಕೊಳ್ಳಬೇಕೇ ಎಂದು ಜನ ಆಡಿಕೊಳ್ಳುತ್ತಾರೆ. ಯಾವಾಗಲೂ ಭೂ-ಸುಧಾರಣೆ (Agrarian Reform) ಎಂಬುದು ಆಗಬೇಕು ಎಂದರೆ ಜಾಗ್ರತೆ ಜನರಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ರೈತರಿಗೆ ಅನುಕೂಲವಾಗಬೇಕೆಂಬ ಭಾವನೆಯಿಟ್ಟುಕೊಂಡಿದ್ದರೆ, ಈ ಬಿಲ್ಲನ್ನು ಇನ್ನೂ ಮುಂದುವರಿಸಿಕೊಂಡು ಹೋಗುವುದಕ್ಕೆ ಕಾರಣವೇನೋ ಗೊತ್ತಿಲ್ಲ. ಹೀಗೆ ನಿಧಾನ ಮಾಡುವುದರ ಹಿನ್ನೆಲೆಯೇನೋ ಅರ್ಥವಾಗುವುದಿಲ್ಲ. ನಾವುಗಳು ಸಾರ್ವಜನಿಕ ಕ್ಷೇತ್ರದಲ್ಲಿ ಮಾತಾಡಲು ನಿಂತರೆ ಜನ ಇನಾಂ ಬಿಲ್ ಏನಾಯಿತು ಎಂದು ಕೇಳಿದರೆ ಉತ್ತರ ಹೇಳುವುದಕ್ಕೇ ಕಷ್ಟವಾಗಿದೆ. ಏನೇ ಆಗಲಿ, ನಾನು ಕೇಳಿಕೊಳ್ಳುತ್ತೇನೆ, ಈ ವರ್ಷ ಮುಗಿಯುವುದರೊಳಗೆ, ಈ ಬಿಲ್ಲು ಎರಡು ಸಭೆಯಲ್ಲೂ ಚರ್ಚೆಯಾಗಿ ಕಾನೂನಾದರೆ ಸಂತೋಷ. ನಾವೂ ಹೊರಗೆ ಹೋಗಿ 'ನಾವು ಇದನ್ನು ಮಾಡಿದ್ದೇವೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಹಾಗಿಲ್ಲದೆ, ಆ ಮಠಾಧಿಪತಿಗಳು ಹೀಗೆ ಹೇಳಿದ್ದಾರೆ, ಇನ್ನೊಬ್ಬರು ಇನ್ನೊಂದು ರೀತಿ ಹೇಳಿದ್ದಾರೆ, ಅದರಂತೆ ಮಾಡದೆ ಇದ್ದರೆ ಶಾಪಕೊಡುತ್ತಾರೆ ಎಂದು ಹೆದರಿ ನಿಧಾನಿಸುವುದು ಸರಿಯಲ್ಲ. ಶಾಪ ಕೊಡುವವರು ಮಠಾಧಿಪತಿ

(ಶ್ರೀ ಬಿ. ಎಸ್. ಬೋರಣ್ಣಗೌಡ.)

ಗಳಲ್ಲ. ನಮ್ಮ ಬಡರೈತರು ನಮ್ಮನ್ನು ಶಪಿಸುತ್ತಾರೆ. ನಮ್ಮ ಜಮೀನು, ನಾವು ಉತ್ತರೂ ನಮಗೆ ಜಮೀನು ಕೊಡುವುದಿಲ್ಲ, ಎಂದು ಅವರು ನಮಗೆ ಶಾಪ ಹಾಕುತ್ತಾರೆ. ದೇವರು ಎಲ್ಲಿದ್ದಾನೆ ಎಂದರೆ ಆ ಬಡಜನರಲ್ಲಿ! ಆದ್ದರಿಂದ ಆ ಬಡಜನರಿಗೆ ಜಮೀನು ಕೊಟ್ಟರೆ ದೇವರಿಗೆ ತೃಪ್ತಿಯಾದಂತಾಗುತ್ತದೆಂದು ಹೇಳಿ, ಈ ಬಿಲ್ಲನ್ನು ಬೇಗ ಕಾನೂನು ಮಾಡಬೇಕೆಂದು ಹೇಳಿ ಸಮರ್ಥಿಸುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಸೆಲೆಕ್ಟ್ ಕಮಿಟಿಯವರ ಪರಿಶೀಲನೆಗೆ ಹೋಗಿ ಅಲ್ಲಿಂದ ಪರಿಪಕ್ವವಾಗಿ ಬಂದಿರತಕ್ಕ ಈ ಮತೀಯ ಮತ್ತು ಧಾರ್ಮಿಕ ಇನಾಂ ರದ್ದಿಯಾತಿ ಮಸೂದೆಯ ಬಗ್ಗೆ ಮಾನ್ಯ ಸದಸ್ಯರನೇಕರು ಮಾತನಾಡಿರುವುದನ್ನು ನಿನ್ನೆ ಮತ್ತು ಈ ದಿವಸ ಕೇಳಿದ್ದೇನೆ. ಈ ಮಸೂದೆ ಬಹಳ ಕಾಲದ ಹಿಂದೆಯೇ ಈ ಸಭೆಯ ಮುಂದೆ ಬಂದು ಇದರ ಅನುಮತಿಪಡೆದು ಜಾರಿಗೆ ಬರಬೇಕಾಗಿತ್ತು. ಅನೇಕ ಕಾರಣಗಳಿಂದ ಮಾನ್ಯಸಚಿವರು ವಿವರಣೆ ಕೊಟ್ಟಿರುವ ಪ್ರಕಾರ ತಡವಾಯಿತು. ಆದರೂ, ಕಡೆಗೂ ಬಂತಲ್ಲಾ, ಅದರಲ್ಲೂ ಸೆಲೆಕ್ಟ್ ಕಮಿಟಿಯವರ ಒಪ್ಪಿಗೆಯನ್ನು ಪಡೆದು ಬಂದಿದೆಯಲ್ಲಾ ಎಂದು ನಾವು ಸಂತೋಷವನ್ನೇನೋ ಪಡುತ್ತೇವೆ. ಈ ಮಸೂದೆಯಮೇಲೆ ಚರ್ಚೆ ನಡೆದಿರತಕ್ಕ ರೀತಿಯನ್ನು ನೋಡಿದರೆ ಅನೇಕ ಮಾನ್ಯಸದಸ್ಯರು ಇದಕ್ಕೆ ಮಂಜೂರಾತಿಯನ್ನು ಕೊಡುವ ಬಗ್ಗೆ ಬಹಳ ಉತ್ಸಾಹವುಳ್ಳವರಾಗಿದ್ದಾರೆಂದು ತೋರುತ್ತದೆ. ನಾನೂ ಕೂಡ ಅವರ ಜೊತೆಗೆ ಸೇರಿ ಆದಷ್ಟು ಜಾಗ್ರತೆ ಇದು ಜಾರಿಗೆ ಬರಲೆಂದು ಆಶಿಸುತ್ತೇನೆ. ಆದರೆ ಈ ಸಂದರ್ಭದಲ್ಲಿ ಇದನ್ನು ಜಾಗ್ರತೆ ಜಾರಿಗೆ ತರಬೇಕೆನ್ನುವ ಉತ್ಸಾಹದ ಭರದಲ್ಲಿ ಇದರಲ್ಲಿರತಕ್ಕ ಲೋಪದೋಷಗಳನ್ನು ಮರೆಯಬಾರದು. ಇದ್ದರಿಂದ ಮುಂದೆ ಆಗಬಹುದಾದ ಅನರ್ಥಗಳನ್ನು ತಡೆಗಟ್ಟುವುದು ಆವಶ್ಯಕವೆಂದು ಹೇಳಿ ಮಾನ್ಯಸದಸ್ಯರ ಅನೇಕ ಮಾತುಗಳನ್ನು ಕೇಳಿದ್ದೇನೆ. ಅದೆಲ್ಲವನ್ನೂ ನಾನು ಪರಿಶೀಲನೆಮಾಡಿ ನೋಡಿದ್ದರಲ್ಲಿ ಈಗ ತಂದಿರುವ ಮಸೂದೆ ಈಗಿರುವ ರೀತಿಯಲ್ಲಿ ಸಭೆಯ ಮಂಜೂರಾತಿಗೆ ಅರ್ಹವಾಗಿದೆಯೇ ಎಂದು ತುಲನಮಾಡಿ ನೋಡಿದರೆ, ಬಹುಶಃ ಇದರಲ್ಲಿ ವಿವಾದಾಸ್ಪದವಾದ, ಚರ್ಚಾಸ್ಪದವಾದ ಅಂಶಗಳು ಎರಡು ಮೂರು ಇರುವುದು ಕಾಣಬರುತ್ತದೆ. ಮುಖ್ಯವಾದ ಈ ಮೂರು ವಿಷಯಗಳನ್ನು ಬಿಟ್ಟರೆ ಬಾಕಿಯೆಲ್ಲವನ್ನೂ ಒಪ್ಪಿಕೊಳ್ಳಬಹುದೆಂದು ನನಗನ್ನಿಸುತ್ತದೆ. ಈ ಮೂರು ವಿಷಯಗಳು ಯಾವುವೆಂದರೆ—ಒಂದು ಪರ್ಮನೆಂಟ್ ಟೆನೆಂಟ್ ಎಂದು ಅರ್ಥ ವಿವರಣೆ ಕೊಡುವ ಸಂದರ್ಭದಲ್ಲಿ ಈ ಬಿಲ್ಲಿನಲ್ಲಿ ಒಂದು ವ್ಯತ್ಯಾಸವನ್ನು ಮಾಡಬೇಕಾಗಿ ಬಂತು. ಇದಕ್ಕೆ ಹಿಂದೆ ಇದೇ ಸಭೆಯವರು ಮಂಜೂರಾತಿ ಕೊಟ್ಟಿದ್ದಂಥ ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ಬಿಲ್ಲಿನಲ್ಲಿ ಇರದೆ, ಇಲ್ಲಿ ಈ ಪರ್ಮನೆಂಟ್ ಟೆನೆಂಟ್ ಎಂಬ ಪದ ಅರ್ಥದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಪಡೆದಿದೆ. ಕಾರಣ, ಪ್ಲಾನಿಂಗ್ ಕಮಿಷನ್ನಿನವರು ಎಲ್ಲಾ ವರ್ಗದ ಗೇಣಿದಾರರಿಗೂ ಕೂಡ ಜಮೀನಿನ ಸ್ವಾಮ್ಯವನ್ನು ಪಡೆಯತಕ್ಕ ಹಕ್ಕನ್ನು ಕೊಡಬೇಕು, ಅದಕ್ಕಾಗಿ ಮಸೂದೆಯಲ್ಲಿ ಸೂಕ್ತವಾದ ತಿದ್ದುಪಡಿಯನ್ನು ಮಾಡಬೇಕೆಂದು ಹೇಳಿ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಬಂದಂಥ ಸಂದರ್ಭದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ್ಗೆ, ಅದನ್ನೇ ಮುನ್ನೆಚ್ಚರಿಕೆಯಾಗಿ ತೆಗೆದುಕೊಂಡು ಪುನಃ ಬದಲಾವಣೆಮಾಡುವ ಪರಿಸ್ಥಿತಿ ಉಂಟಾಗದಂತೆ ಸೂಕ್ತ ಬದಲಾವಣೆ ಮಾಡಿ ಈ ಮಸೂದೆಯನ್ನು ಈ ಸಭೆಯ ಮಂಜೂರಾತಿಗೆ ಕಳುಹಿಸುವುದು ಸೂಕ್ತವೆಂದು ಸೆಲೆಕ್ಟ್ ಕಮಿಟಿಯವರು ಏನು ಆಲೋಚನೆ ಮಾಡಿದರೋ ಅದು ಬಹಳ ಮೆಚ್ಚಿಕೆಯನ್ನು ಪಡೆಯತಕ್ಕ ವಿಚಾರ. ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿರತಕ್ಕ ಪರ್ಮನೆಂಟ್ ಟೆನೆಂಟ್‌ಗೆ ಇರತಕ್ಕ ಅರ್ಥವಿವರಣೆಯನ್ನೇ ಉಳಿಸಿಕೊಂಡು ಬಾಕಿ ವಿಧವಾಗಿರತಕ್ಕ ಗೇಣಿದಾರರನ್ನೂ ಇನಾಂದಾರರ ಅಧೀನದಿಂದ ತಪ್ಪಿಸಿ, ಇನಾಂತಿ ರದ್ದಾಗುವುದರಿಂದ ಇನಾಂದಾರರಿಗೂ ಅವರಿಗೂ ಯಾವ ಸಂಬಂಧವೂ ಇರಕೂಡದು ಎಂದು ಹೇಳಿ, ಆ ವಿಧವಾದ ಜಮೀನುಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ಸರ್ಕಾರದ ಅಧೀನದಲ್ಲಿ ಇರುವಂತೆ ಮಾಡಿ ಕಾನೂನಿನಲ್ಲಿ ಮಾರ್ಪಾಟು ಮಾಡಿ 6 ನೆಯ ಕ್ಲಾಜ್ ಒಂದನ್ನು ಸೇರಿಸಿದ್ದಾರೆ. ಈ ಸಭೆಯಲ್ಲಿ ಉಂಟಾಗಬಹುದಾದ ಮಾನಸಿಕ confusion ಅಥವಾ ಸಂದಿಗ್ಧವಾದ ಯಾವುದೇ ಅನುಮಾನಕ್ಕೂ ಅವಕಾಶವಿಲ್ಲದಂತೆ ಸಮಿತಿಯವರು ಇದನ್ನು ಮಾಡಿದ್ದಾರೆಂದು ಹೇಳಬೇಕಾಗಿದೆ.

ಎರಡನೆಯ ಮುಖ್ಯ ಅಂಶವೆಂದರೆ, ಇನಾಂದಾರರಿಗೆ compensation ಕೊಡತಕ್ಕದ್ದು ಮತ್ತು ಪರ್ಮನೆಂಟ್ ಟೆನೆಂಟಿನಿಂದ ಸರ್ಕಾರದವರು ಪಡೆಯತಕ್ಕ ಪ್ರೀಮಿಯಮ್ಮು. ಇದನ್ನು ಪರಿಶೀಲನೆ ಮಾಡತಕ್ಕ ಸಂದರ್ಭದಲ್ಲಿ ಪ್ರತಿಯೊಬ್ಬರೂ ಬಹಳ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. ಅನೇಕ ಮಾನ್ಯ ಸದಸ್ಯರುಗಳು ಕೆಲವು ಉದಾರಣೆಗಳನ್ನು ಕೊಟ್ಟು ಬಹಳ ದೀರ್ಘವಾದ ಭಾಷಣಗಳನ್ನು ಮಾಡಿ ಇದನ್ನು ವಿಮರ್ಶೆ ಮಾಡಿದ್ದಾರೆ. ಆದರೆ, ನನ್ನ ಮನಸ್ಸಿಗನ್ನಿಸುತ್ತದೆ, ಅವರು ಕೊಟ್ಟಿರತಕ್ಕ ಅನೇಕ ಉದಾಹರಣೆಗಳಲ್ಲ, ಕೆಲವು ಬಹಳ extreme ಆದ ಸಂದರ್ಭಗಳನ್ನು ತೋರಿಸುತ್ತಾ, ಕೇವಲ ಅತ್ಯಲ್ಪ ಪ್ರಮಾಣದಲ್ಲಿರಬಹುದಾದ ವಿಶೇಷ ಸಂದರ್ಭಗಳನ್ನು ಬಿಟ್ಟು ಈ ಕ್ಲಾಜಿನ ಮೇಲೆ ವಿವರಣೆ ಕೊಟ್ಟಿದ್ದಾರೆ. ಒಂದು ಎಕರೆಗೆ 5,000 ರೂಪಾಯಿ, ಹತ್ತು ಸಾವಿರ ರೂಪಾಯಿ ಟಿ. ನರಸೀಪುರದಲ್ಲಿದೆಯೆಂದು ಹೇಳಿದರು; ಇರಬಹುದು. ಜಮೀನು ವ್ಯವಹಾರಗಳನ್ನು ನೋಡಿಕೊಳ್ಳುವ ಪ್ರತಿಯೊಬ್ಬರಿಗೂ ಜಮೀನಿನ ಬೆಲೆಗಳು ಏನು ಎಂಬುದು ಗೊತ್ತೇ ಇರುತ್ತದೆ. ಆದರೆ, ಇಂಥ ಜಮೀನುಗಳು ಎಷ್ಟು ಪ್ರಮಾಣದಲ್ಲಿವೆ, ಈ ಮಸೂದೆಯಲ್ಲಿರತಕ್ಕ ಈ provision ನಿಂದ ಎಷ್ಟು ಜನರಿಗೆ ಒಳ್ಳೆಯದು, ಅನುಕೂಲ ಆಗುತ್ತದೆ, ಒಳ್ಳೆಯ ಪರಿಣಾಮವಾಗುತ್ತದೆಯೇ, ಕೆಟ್ಟ ಪರಿಣಾಮವಾಗುತ್ತದೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಹೀಗೆ ಕೇವಲ ಚಿಕ್ಕಪುಟ್ಟ ವಿಷಯಗಳಿಗೋಸ್ಕರವಾಗಿ ಅಥವಾ ಯಾವುದೋ ಒಂದು ವಿಶೇಷ ಸಂದರ್ಭದ ಆಧಾರದಮೇಲೆಯೇ ಬಹುಸಂಖ್ಯಾತರಿಗೆ ಅನುಕೂಲವಾಗತಕ್ಕಂಥ ಮಸೂದೆಗಳನ್ನು ಪಾಸ್ ಮಾಡತಕ್ಕ ಕಾಲದಲ್ಲಿ ಬಹುಮತಾಭಿಪ್ರಾಯಗಳನ್ನು ಮೂಲೆಗೊತ್ತಿ ಕೇವಲ ವಿಶೇಷ ಸಂದರ್ಭದ ಒಂದು ಕಾರಣಕ್ಕಾಗಿಯೇ ಬಿಲ್ಲನ್ನು ಮುಂದಕ್ಕೆ ತಳ್ಳಿಹಾಕಿ ವ್ಯಥಾ ಕಾಲಹರಣೆಗೆ ಅವಕಾಶ ಕಲ್ಪಿಸಿರತಕ್ಕಂಥ ಒಂದು ಸನ್ನಿವೇಶವನ್ನು ನಾನು ಇಲ್ಲಿಯವರೆಗೂ ಈ ಶಾಸನ ಕಡಿತದ ಚರಿತ್ರೆಯಲ್ಲೇ ಎಲ್ಲಿಯೂ, ಎಂದೂ ಕಂಡಿಲ್ಲ. ಆದುದರಿಂದ ಕೇವಲ ಕೆಲವು ಸಣ್ಣಪುಟ್ಟ ಕಾರಣಗಳಿಗೋಸ್ಕರವಾಗಿ ಆದಷ್ಟು ತ್ವರಿತದಿಂದ ಶಾಸನ ಕಡಿತಕ್ಕೇರಿಸುವಂಥ ಮಸೂದೆಗಳನ್ನು ಶೇಕಡ 75 ರಷ್ಟು ಬಹುಮತಾಭಿಪ್ರಾಯವಿದ್ದಾಗಲೂ, ಅವುಗಳಿಗೆ ಕಾನೂನು ಅನ್ವಯಯವಾಗಬಾರದು, ಕೇವಲ ಒಂದೆರಡು ವಿಶೇಷ

ಸಂದರ್ಭಗಳೇನಿವೆಯೋ ಅವುಗಳಿಗನುಗುಣವಾಗಿಯೇ ಕಾನೂನು ರಚನೆಯಾಗಬೇಕು ಎಂಬುದಾಗಿ ವಾದಿಸತಕ್ಕದ್ದು ಅಷ್ಟು ಸೂಕ್ತವಾಗಿರುತ್ತದೆಯೆಂದು ನನಗೆ ಕಂಡುಬರುವುದಿಲ್ಲ.

ಇನ್ನು ಈ ಪರ್ಮನೆಂಟ್ ಟೆನೆಂಟ್ಸ್‌ಗಳಿಂದ ಎಷ್ಟು ಪ್ರೀಮಿಯಂಅನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯದಲ್ಲಿ ಹಲವರು ಈಗಾಗಲೇ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಸರ್ಕಾರದವರು ಆ ರೈತನು ಆ ಜಮೀನ್ ಕಂದಾಯದ 20 ರಷ್ಟು ಭಾಗದ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಹೀಗೆ ಹೇಳಿರತಕ್ಕದ್ದು ಬಹಳ ಒಳ್ಳೆಯದಾಗಿದೆ. ಈ ಮೊಬಲಗನ್ನು ಕೊಡುವುದರಲ್ಲಿ ಆ ಗೇಣೀದಾರನಿಗೇನೂ ಅಷ್ಟು ಹೆಚ್ಚಿನ ತೊಂದರೆಯಾಗಲಾರದು. ಇದಕ್ಕೆ ಕಾರಣವಾದರೂ ಇಷ್ಟೆ:—ಈ ದಿವಸ ನಾವುಗಳೇ ಯಾರಾದರೂ ನಮ್ಮ ಸ್ವಂತ ಹಕ್ಕಿನೊಳಗಿರುವಂಥ ಒಂದು ಜಮೀನನ್ನು ನಾವೇ ಅದಕ್ಕೆ ಮಾಲೀಕರಾಗಿದ್ದರೂ, ಆ ಜಮೀನನ್ನು ನಾವು ಯಾವ ಒಂದು ಉದ್ದೇಶಕ್ಕೆ ಮಾತ್ರವೇ ಉಪಯೋಗಮಾಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿರುತ್ತಾರೋ ಅಂಥಾ ಒಂದು ಉದ್ದೇಶವನ್ನು ಬಿಟ್ಟು ಆ ಜಮೀನನ್ನು ಮತ್ತೊಂದು ಉದ್ದೇಶಕ್ಕಾಗಿ. ಎಂದರೆ ಒಂದು ಕೈಗಾರಿಕಾ ಸ್ಥಾಪನೆಗಾಗಿಯೋ ಅಥವಾ ಮತ್ತೆ ಯಾವುದೋ ಒಂದು ಉದ್ದೇಶಕ್ಕಾಗಿಯೋ ಉಪಯೋಗ ಮಾಡಬೇಕೆಂದು ಹೊರಟಾಗ—ಅದಕ್ಕೆ ರೆವಿನ್ಯೂ ಮಿನಾಯ್ತಿ ಕೇಳಿದರೆ, ಸರ್ಕಾರಕ್ಕೆ ಏಲಿನೇಷನ್ ಮಾಡಿ ಕೊಡಿ ಎಂದು ಕೇಳಿದರೆ—ಅದಕ್ಕೆ ಆ ಭೂಮಿಯ ಮಾಲೀಕನು ಆ ಭೂಮಿಯ ಕಂದಾಯದ 20 ರಷ್ಟು ಮೊಬಲಗನ್ನು ಸರ್ಕಾರಕ್ಕೆ ಪಾವತಿಮಾಡಿದ ನಂತರ ಆ ಭೂಮಿಯನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಬಹುದೆಂದು ಕಾನೂನೇ ಇದೆ. ಈಗ ಹಾಲಿ ಈ ಕಾನೂನು ಜಾರಿಯಲ್ಲಿದೆ. ಹೀಗೆ ನಮ್ಮ ಜಮೀನಿಗೇ ನಾವು 20 ರಷ್ಟು ಕಂದಾಯ ಕೊಡುತ್ತಿರುವಾಗ, ಈ ಗೇಣೀದಾರರು ತಾವು ಭೂಮಿಗೆ ಒಡೆಯರಾಗತಕ್ಕ ಸಂದರ್ಭದಲ್ಲಿ ಈ 20 ರಷ್ಟು ಮೊಬಲಗನ್ನು ಕೊಡುವುದರಲ್ಲೇನೂ ಅಷ್ಟು ಅತಿಶಯವಿದ್ದಂತೆ ಕಂಡುಬರುವುದಿಲ್ಲ. ಈ ಒಂದು ಮೊಬಲಗನ್ನೂ ಸಹ ಅವರು ಬಹಳ ತೂಕಮಾಡಿ ಹಾಕಿದ್ದಾರೆ.

ಇನ್ನು ಈ ತಸ್ದೀಕ್ ವಿಚಾರ. ಈ ತಸ್ದೀಕ್ ಅಲೋಯನ್ಸನ್ನು ಕೊಡುವ ಭಾರವನ್ನು ಸರ್ಕಾರದವರೇ ವಹಿಸಿಕೊಳ್ಳುತ್ತಾರೆಂದು ಹೇಳಿರತಕ್ಕದ್ದನ್ನು ನಾವು ಗಣನೆಗೆ ತೆಗೆದುಕೊಂಡರೆ—ಇದು ಸರ್ಕಾರದ ಮೇಲೆ ಬೀಳತಕ್ಕಂಥ ಒಂದು ದೊಡ್ಡ ಹೊರೆ ಮತ್ತು ಇದು ಒಂದು ದೊಡ್ಡ ಜವಾಬ್ದಾರಿಯೂ ಹೌದು. ಆದರೆ ಇಂಥ ಒಂದು ದೊಡ್ಡ ವಜೆಯನ್ನು ಹೊರತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಬಹಳ ಕಮ್ಮಿಯಾಗಿದೆಯೆಂದು ಕಂಡುಬರುತ್ತಿರುವುದರಿಂದ ಈ ವಿಚಾರವಾಗಿ ನಾವೆಲ್ಲರೂ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಪ್ರತಿ ವರ್ಷವೂ ಈ ತಸ್ದೀಕ್ ಅಲೋಯನ್ಸನ್ನು ನಿರ್ಧರ ಮಾಡತಕ್ಕ ಕಾಲದಲ್ಲಿ ಈ 'ಬೇಸಿಕ್ ಆನ್ಯುಯಲ್' ಸಂನಲ್ಲಿ ಯಾವ್ಯಾವುದು ವಜಾ ಹೋಗಬೇಕೋ ಅದೆಲ್ಲವನ್ನೂ ವಜಾಮಾಡಿ, ತದನಂತರ ಉಳಿಯತಕ್ಕ ಮೊಬಲಗಿನಲ್ಲಿ ಪ್ರತಿವರ್ಷವೂ ಅವರಿಗೆ ಅಷ್ಟನ್ನೂ ಪೂರ್ತಿಯಾಗಿ ತಪ್ಪದಂತೆ ಯಾವ ಕಾಲಕ್ಕೂ ಕೊಡುತ್ತಾ ಹೋಗಬೇಕೆಂದು ಹೇಳುವುದು ಬಹಳ ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಳ್ಳುವಂಥ ವಿಚಾರ. ಈ ಸಂಸ್ಥೆಗಳು ಎಲ್ಲಿಯತನಕ ಅಸ್ತಿತ್ವದಲ್ಲಿ ಉಳಿದುಕೊಂಡಿರುತ್ತವೆಯೋ ಅಷ್ಟು ಕಾಲದವರೆಗೂ ಇಷ್ಟೊಂದು ಮೊಬಲಗನ್ನು ವರ್ಷಂಪ್ರತಿ ಕೊಡುತ್ತಾ ಹೋಗುತ್ತೇವೆಂದು ಒಪ್ಪಿಕೊಳ್ಳುವುದು ಬಹಳ ಹೆಚ್ಚಿನ ವಿಚಾರ ಮತ್ತು ಇದೊಂದು ದೊಡ್ಡ ಹೊರೆ. ಇಂಥಾ ಒಂದು ದೊಡ್ಡ ಹೊರೆಯನ್ನು ಹೊರಲು ಮತ್ತು ಇದನ್ನು ನಿರ್ವಹಿಸಿಕೊಂಡು ಬರಲು ಸರ್ಕಾರಕ್ಕೆ ಶಕ್ತಿಯಿದೆಯೇ ಎಂದು ನಾವು ಆಲೋಚನೆಮಾಡಿ ನೋಡಿದರೆ ಈಗ ಹಾಲಿ ಇರತಕ್ಕ ಸರ್ಕಾರದ ಮಾತು ಹಾಗಿರಲಿ' ಇನ್ನು 50–100 ವರ್ಷಗಳು ಕಳೆದನಂತರ ಬರುವಂಥ ಆ ಮುಂದಿನ ಸರ್ಕಾರಗಳ ಮೇಲೂ ಕೂಡ ಈ ಭಾರವನ್ನು ಹೊರಿಸತಕ್ಕಂಥ ಒಂದು ಅವಕಾಶ ಇದರಿಂದ ಉಂಟಾಗುತ್ತದೆಯಲ್ಲಾ ಎಂಬುದಕ್ಕಾಗಿ ನಾವು ಈ ವಿಚಾರದಲ್ಲಿ ತುಂಬಾ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. Is there any necessity for us to see that the Government will entertain a burden, a longstanding burden of this kind? ಆದುದರಿಂದ ಇದರ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ಇಂಥ ಒಂದು ಶಾಶ್ವತವಾದ ಹೊರೆಯನ್ನು ಸರ್ಕಾರ ಹೊರಲು ಒಪ್ಪಿರತಕ್ಕದ್ದು ಅಂಥ ಒಂದು ರಾಜನೀತಿಯೇನೂ ಆಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಈ ಸಂಬಂಧವಾಗಿ ಸರ್ಕಾರದವರಿಗೆ—ನಾನು ಕೊಡಬಯಸತಕ್ಕಂತ ಸಲಹೆಯೇನೆಂದರೆ—ಈ ಬೇಸಿಕ್ ಅಲೋಯನ್ಸನ್ನು ಈ ಸಂಸ್ಥೆಗಳಿಗೆ ಕೊಡತಕ್ಕ ಸಂಬಂಧದಲ್ಲಿ ನಾವು ಈ ಹಿಂದೆ ಆಗಲೇ ಆ ಪರ್ಸನಲ್ ಅಂಡ್ ಮಿಸಲೇನಿಯಸ್ ಇನಾಂಗಳ ರದ್ದಿಯಾತಿ ಮಸೂದೆಯ ಬಗ್ಗೆ ಇನಾಂದಾರರುಗಳಿಂದ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳುವಾಗ ಆ ಇನಾಂದಾರರುಗಳಿಗೆ ಏನೊಂದು ಪರಿಹಾರವನ್ನು ಕೊಡಬೇಕೆಂದು ಮಾಡಿದ್ದೇವೋ ಅದೇ ಮಾದರಿಯಲ್ಲಿ ಅಂದರೆ ಆ ತತ್ವದ ಆಧಾರದ ಮೇಲೆಯೇ ಇಲ್ಲಿಯೂ ಸಹ ಈ ಧಾರ್ಮಿಕ ಸಂಸ್ಥೆಗಳಿಗೆ ಕೊಡತಕ್ಕಂಥ ಮೊಬಲಗನ್ನು ಈಗಲೇ ಬೇಕಾಗಿದ್ದರೆ ಇನ್ನೂ ಸ್ವಲ್ಪ ಹೆಚ್ಚಿನ ಪರ್ಸೆಂಟೇಜಿನಲ್ಲಿ ಪಾವತಿಮಾಡಿಬಿಟ್ಟರೆ ಆಗ ಆ ಸಂಸ್ಥೆಗಳು ಈ ಮೊಬಲಗನ್ನು—ಅವುಗಳಿಗೆ usufruct-right ಇರುವುದರಿಂದ ಯಾವುದಾದರೂ ಒಂದುಕಡೆ ಸೇವಿಂಗ್ಸ್ ನಿಧಿಯಾಗಿ ಅದನ್ನು ಇಟ್ಟುಬಿಟ್ಟು ತನ್ಮೂಲಕ ಬರುವಂಥ ಬಡ್ಡಿ ಇತ್ಯಾದಿ ವರಮಾನಗಳಿಂದ ಆ ಸಂಸ್ಥೆಗಳ ಧರ್ಮದರ್ಶಿಗಳು ಆ ಸಂಸ್ಥೆಗಳ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವಂತೆ ಒಂದು ಏರ್ಪಾಡನ್ನು ಮಾಡುವುದು ಒಳ್ಳೆಯದೆಂದು ನನಗೆ ಅನ್ನಿಸುತ್ತದೆ. ಆದರೆ ಈ ತಸ್ದೀಕ್ ಮೊಬಲಗನ್ನು ಈ ಧಾರ್ಮಿಕ ಸಂಸ್ಥೆಗಳಿಗೆ ಕೊಡತಕ್ಕ ವಿಚಾರವಾಗಿ ಇದನ್ನು ಒಂದು ಅನಿರೀಕ್ಷಿತಕಾಲದವರೆಗೂ ಅಂದರೆ ಆ ಚಂದ್ರಾರ್ಕಸ್ಥಾಯಿಯಾಗಿ ನಡೆಸಿಕೊಂಡು ಬರುವಂಥ ರೀತಿಯಲ್ಲಿ ಪದಗಳನ್ನು ಹಾಕಿ ಬಿಲ್ಲನ್ನು ತಯಾರಿಸಬೇಕಾಗಿತ್ತೆಂದು ಶ್ರೀ ಪಿ. ಆರ್ ರಾಮಯ್ಯನವರು ಒಂದು ದೀರ್ಘವಾದ ಭಾಷಣವನ್ನೇ ಮಾಡಿದ್ದಾರೆ. ಆದರೆ ಅದೇಕೋ ಅವರು ತಮ್ಮ ಒಂದು ವಾದವನ್ನು ಯಾವಾಗ್ಲೂ ಒಂದೇ ರೀತಿಯಾಗಿ, ಒಂದೇ ಧಾಟಿಯಲ್ಲಿ ಮಾಡುತ್ತಿದ್ದಾರೆ. ಅವರು ಸರ್ವ ದೇವರುಗಳ ಹೆಸರಿನಿಂದ ಈ ಸಭೆಯ ಸದಸ್ಯರುಗಳನ್ನೆಲ್ಲಾ ಉದ್ರೇಕಗೊಳಿಸಲು ಬಹಳವಾಗಿ ಪ್ರಯತ್ನಪಟ್ಟರು. ಆದರೆ ಆ ಮಾನ್ಯಸದಸ್ಯರು ಈ ಬಿಲ್ಲಿನಲ್ಲಿ ಅಡಕವಾಗತಕ್ಕಂಥ ದೇವರುಗಳು ಇರತಕ್ಕದ್ದು ಕೇವಲ ಈ ನಮ್ಮ ಮೈಸೂರು ದೇಶ ಒಂದರಲ್ಲೇ ಅಲ್ಲ ಇಡೀ ಇಂಡಿಯಾ ದೇಶದಲ್ಲೆಲ್ಲಾ ಇರುತ್ತವೆಂದೂ ಮತ್ತು ಹಾಗೆಯೇ ಈ ರಿಲಿಜಿಯಸ್ ಅಂಡ್ ಛಾರಿಟಬಲ್ ಇನಾಂ ರದ್ದಿಯಾತಿ

(ಶ್ರೀ ವಿ. ಮಸಿಯಪ್ಪ.)

ಮಸೂದೆಯೊಳಗೆ ಅಡಕವಾಗದೇ ಇರುವಂಥ ದೇವತೆಗಳೂ ಇನ್ನೂ ದೇಶದಲ್ಲಿ ಲಕ್ಷೋಪಲಕ್ಷಗಟ್ಟಲೆ ಇರುತ್ತಾರೆಂದೂ, ಆ ದೇವತೆಗಳಿಗೆ ಇಲ್ಲಿಯತನಕ ಯಾವ ಒಂದು ಧಾರ್ಮಿಕ ಸಂಸ್ಥೆಯೂ ಇಲ್ಲ, ಯಾವ ಒಂದು ಕಾನೂನೂ ಇಲ್ಲ, ಅವರಿಗೆ ಜನರು ಎಷ್ಟೋ ಅನ್ಯಾಯ ಮಾಡಿಕೊಂಡು ಹೋಗುತ್ತಿದ್ದರೂ, ಅವರು ಸರ್ಕಾರಕ್ಕಾಗಲಿ, ಅಥವಾ ಬೇರೆ ಜನಗಳಿಗಾಗಲಿ ಯಾವ ಒಂದು ತೊಂದರೆಯನ್ನೂ ಉಂಟುಮಾಡದಂತೆ ನಡೆದು ಹೋಗುತ್ತಿದ್ದಾರಲ್ಲಾ ಅಂಥ ದೇವತೆಗಳ ಬಗ್ಗೆ ಈಗ ಈ ರೀತಿಯಾಗಿ ಒಂದು ಬಿಲ್ಲನ್ನು ತಯಾರಿಸುವುದರಿಂದ ಯಾವ ದೇವರಿಗೂ ಏನೂ ತೊಂದರೆಯಾಗುವುದಿಲ್ಲ ಎಂಬ ವಿಷಯವನ್ನು ಅವರು ಆಲೋಚನೆ ಮಾಡಬೇಕಾಗಿತ್ತೆಂದು ನನಗೆ ಅನ್ನಿಸುತ್ತದೆ. ಆದರೆ ಯಾವಾಗ್ಲೂ ಯಾವ ದೇವರೇ ಆಗಲಿ ಅಥವಾ ದೇವತೆಯೇ ಆಗಲಿ ಬಯಸತಕ್ಕದ್ದೇನೆಂದರೆ—ಭಕ್ತಿಯೊಂದನ್ನು ಹೊರತು ಈ ಆಡಂಬರದ ನಾಟಕವನ್ನು ಎಂದಿಗೂ ಬಯಸುವುದಿಲ್ಲ. ಅವಾಗ್ಲೂ ನಮಗೆಲ್ಲಾ ಬಹಳ ಕಾಲದಿಂದಲೂ ಈ ಒಂದು ಸೆಂಟಿಮೆಂಟ್ ಮನಸ್ಸಿನಲ್ಲಿ ಬೆಳೆದುಕೊಂಡು ಬಂದಿದೆ. ಆದರೆ ನಮ್ಮ ಈಗಿರತಕ್ಕ ರಾಜ್ಯಾಂಗದ ಪ್ರಕಾರ ಯಾವ ಒಂದು ಆಸ್ತಿಯನ್ನೇ ಆಗಲಿ ಯಾರಿಂದಲಾದರೂ ನಾವು ತೆಗೆದುಕೊಳ್ಳಬೇಕಾದರೆ ಅಂದರೆ ಆ ಸ್ವತ್ತನ್ನು ಅಕ್ವಯರ್ ಮಾಡಿಕೊಳ್ಳಬೇಕಾಗಿದ್ದರೆ ಆ ಸ್ವತ್ತಿನ ಮಾಲೀಕರಿಗೊಂದು ನ್ಯಾಯವಾದ ಪರಿಹಾರವನ್ನು ಕೊಡದೆ ತೆಗೆದುಕೊಳ್ಳಕೂಡದೆಂದು ಹೇಳಿರುವುದರಿಂದ—ನಾವೀಗ ಇಷ್ಟೆಲ್ಲವನ್ನೂ ಪರಿಶೀಲನೆ ಮಾಡಬೇಕಾಗಿ ಬಂತು. ಹೀಗಿರುವಾಗ ಈ ಧಾರ್ಮಿಕ ಸಂಸ್ಥೆಗಳಿಗೆ ಒಂದು ಹೊಸ ವರಮಾನದ ದಾರಿಯನ್ನು ಹಾಕಿಕೊಟ್ಟ ನಂತರ ಆ ಸಂಸ್ಥೆಗಳ ಆಡಳಿತದಲ್ಲಿರುವಂಥ ಆಸ್ತಿಗಳನ್ನು ಬಿಟ್ಟುಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೆ ಎಲ್ಲಿಯೂ ಅವಕಾಶವಿಲ್ಲ ಮತ್ತು ಈಗ ಅಂಥ ಆಸ್ತಿಗಳ ಅಗತ್ಯಕೂಡ ಆ ಸಂಸ್ಥೆಗಳಿಗೆ ಇರುವುದಿಲ್ಲ. ಇಷ್ಟಕ್ಕಾಗಿ ಆ ದೇವರುಗಳೆಲ್ಲಾ ನಮ್ಮ ಮೇಲೆ ಕೋಪ ಹೊಂದಿ ನಮಗೆಲ್ಲಾ ಇಲ್ಲದ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಾರೆ ಎಂಬುದಾಗಿ ನಾವುಗಳಾರೂ ಅದಕ್ಕೆ ದೀರ್ಘವಾಗಿ ಆಲೋಚನೆ ಮಾಡಬೇಕಾಗಿಲ್ಲ. ನಾವೆಲ್ಲರೂ ನ್ಯಾಯವಾಗಿ ಮತ್ತು ಸರಿಯಾಗಿ ಎಲ್ಲಿಯವರೆಗೂ ನಡೆದುಕೊಂಡು ಹೋಗುತ್ತೇವೋ ಅಲ್ಲಿಯವರೆಗೂ ಆ ದೇವರುಗಳು ನಮ್ಮೆಲ್ಲರನ್ನೂ ಕಾಪಾಡಿಕೊಂಡು ಬಂದೇಬರುತ್ತಾರೆ. ಆದರೆ ಇಂಥ ಒಂದು ಮಸೂದೆಯನ್ನು ನಾವು ಪಾಸ್ ಮಾಡುವುದರಿಂದ ದೇಶಕ್ಕೆಲ್ಲಾ ಇನ್ನೂ ಹೆಚ್ಚಿನ ಕ್ಷೇಮವಾಗುತ್ತದೆಯೇ ಹೊರತು ಇದರಿಂದೇನೂ ದೇಶಕ್ಕೆ ಅನರ್ಥವಾಗುವುದಿಲ್ಲವೆಂದು ಆ ಮಾನ್ಯ ಸದಸ್ಯರಿಗೆ ನಾನು ತಿಳಿಸಲಿಚ್ಛಿಸುತ್ತೇನೆ.

ಅವರು ಇನ್ನು ಒಂದು ಡಿಸೆಂಟಿಂಗ್‌ನೋಟ್ ಏನು ಕೊಟ್ಟಿದ್ದಾರೋ ಅದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿದರೆ ಅಷ್ಟೇನೂ ತಪ್ಪಾಗಲಾರದೆಂದು ಭಾವಿಸುತ್ತೇನೆ. ಅವರು ಮೊಟ್ಟಮೊದಲನೆಯದಾಗಿ ಈ in perpetuity ಎಂಬುದಾಗಿ ತಿಳಿಸುತ್ತಾ, ಈ ಆಸ್ತಿಗಳನ್ನೆಲ್ಲಾ ಆ ಧಾರ್ಮಿಕ ಸಂಸ್ಥೆಗಳಿಗೆ ದಾನಕೊಟ್ಟಂಥ ಕಾಲದಲ್ಲಿ ಆ ಮೂಲಪುರುಷರು ಈ ದತ್ತಿಗಳೆಲ್ಲವೂ ಶಾಶ್ವತವಾಗಿ, ನಿರಾತಂಕವಾಗಿ, ಸೂರ್ಯ ಚಂದ್ರರಿರುವತನಕ ಇವುಗಳು ನಡೆದುಕೊಂಡು ಹೋಗಬೇಕೆಂಬ ಉದ್ದೇಶ್ಯದಿಂದ ಅವುಗಳನ್ನು ದಾನಮಾಡಿದ್ದಾರೆ. ಆದರೆ ನಾವೀಗ ಆ ಉದ್ದೇಶಕ್ಕೆ ಧಕ್ಕೆತರುವ ಹಾಗೆ ಈ ಒಂದು ಕಾನೂನನ್ನು ತಯಾರಿಸಿರುವುದು ಒಂದು ತಪ್ಪೆಂಬುದಾಗಿ ಹೇಳಿದ್ದಾರೆ. ಆದರೆ ಈ ಆಸ್ತಿಗಳನ್ನೆಲ್ಲಾ ಯಾವ ಆ ಒಂದು ಸಂಸ್ಥೆಗೆ ಕೊಡಲಾಗಿದೆಯೋ ಅಂಥಾ ಸಂಸ್ಥೆಯ ಮೂಲ ಗುರುಗಳಾದಂಥ ಶ್ರೀ ಶಂಕರಾಚಾರ್ಯರೇ ಒಬ್ಬ ದೊಡ್ಡ ಅದ್ವೈತ ವೇದಾಂತವಾದಿಗಳು. ಅವರೇ ಹೇಳಿದ್ದಾರೆ—ದೇವನೊಬ್ಬ ಶಾಶ್ವತವೇ ಹೊರತು ಇನ್ನುಳಿದವುಗಳೆಲ್ಲಾ ಅಶಾಶ್ವತ ಎಂದು. ಪ್ರಪಂಚದಲ್ಲಿರತಕ್ಕಂಥ ಪ್ರತಿಯೊಂದು ಸಮಾಜ ಮತ್ತು ಅದರ ಸಂಸ್ಥೆಗಳನ್ನು ಶಾಶ್ವತವಾಗಿರುವಂತೆ ಮತ್ತು ಅವುಗಳು ಸದಾ ತಮ್ಮ ತಮ್ಮ ಕರ್ತವ್ಯಪಾಲನೆಯನ್ನು ಸರ್ವಕಾಲದಲ್ಲೂ ನಡೆಸಿಕೊಂಡು ಹೋಗುವಂತೆ ಮಾಡಲು ನಾನೇ ಆಗಾಗ್ಗೆ ಹುಟ್ಟಿಬರುತ್ತೇನೆ ಎಂದು ಅವರು ಹೇಳಿರತಕ್ಕಂಥ ವಾಕ್ಯಕ್ಕೆ ಅವರು ಈಗ ಮಾಡುತ್ತಿರುವ ವಾದ ತೀರ ಅನ್ಯಾಯವಾಗಿದ್ದಂತೆ ಕಾಣುತ್ತಿದೆ. ಹಾಗೆ ಅವರು ಹೇಳಿರತಕ್ಕಂಥ ತತ್ವದಲ್ಲಿ ಅಡಕವಾಗಿರುವುದು ಕೇವಲ ಭಕ್ತಿಯೊಂದೇ ಹೊರತು ಅವರು ವ್ಯಕ್ತಿಗಳನ್ನೇನೂ ಮನಸ್ಸಿನಲ್ಲಿಟ್ಟುಕೊಂಡಿರಲಿಲ್ಲವೆಂಬುದು ಚೆನ್ನಾಗಿ ಗೊತ್ತಾಗುತ್ತದ. ಆ ಧರ್ಮಮಂದಿರಗಳಲ್ಲಿ ಸದಾ ಧರ್ಮಜ್ಯೋತಿ ಬೆಳಗಿದರೆ ಸಾಕು; ಅಷ್ಟಕ್ಕೆ ತಕ್ಕಂಥ ಸೌಲಭ್ಯಗಳನ್ನು ನಾವು ಒದಗಿಸಲು ಪರಿಶೀಲನೆಮಾಡಬೇಕೇ ಶಿವಾಯಿ ಆ ಸಂಸ್ಥೆಗಳಲ್ಲಿ ಸೇರಿಕೊಂಡಿರತಕ್ಕಂಥ ಕೆಲವು ವ್ಯಕ್ತಿಗಳನ್ನು ಈ ಕಾನೂನು ಮೂಲಕ ಉಳಿಸಿಕೊಂಡು ಹೋಗಬೇಕೆಂಬುದಾಗಿ ಭಾವಿಸಿದ್ದರೆ ಅದು ಅವರ ತಪ್ಪು. ಆದುದರಿಂದ ಇಲ್ಲಿ 'ಪರ್‌ಪೆಚ್ಯುಯಿಟಿ' ಅನ್ನತಕ್ಕಂಥ ಪದವನ್ನು ತೆಗೆದು ಆ ಸಂಸ್ಥೆಗಳು ಎಲ್ಲಿಯವರೆಗೆ ಆ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತವೆಯೋ ಅಲ್ಲಿಯವರೆಗೆ ಅವುಗಳಿಗೆ ಈ ಸೌಲಭ್ಯಗಳನ್ನು ಕೊಟ್ಟರೆ ಸಾಕು ಎಂದು ಮಾಡಿರತಕ್ಕದ್ದು ಸರಿಯಾಗಿದೆ.

ಆದರೆ ಇನ್ನು ಈ ತಸ್ದೀಕ್ ಕೊಡತಕ್ಕ ವಿಚಾರದಲ್ಲಿ ಶಾಶ್ವತವಾಗಿ ಯಾವ ಕಾಲಕ್ಕೂ ಇದನ್ನು ತಪ್ಪದಂತೆ ಕೊಟ್ಟುಕೊಂಡು ಬರುವಂಥ ಒಂದು ದೊಡ್ಡ ಹೊಣೆಗಾರಿಕೆಯನ್ನು ಸರ್ಕಾರ ಹೊರುವುದಕ್ಕೆ ಬದಲಾಗಿ ಈ ಪ್ರಶ್ನೆಯನ್ನು ತಾವು once and for all dispose of ಮಾಡಿ ಬಿಟ್ಟು, ಆಯಾ ಸಂಸ್ಥೆಗಳಿಗೆ ಸಲ್ಲಬೇಕಾದ ಮೊಬಲಗನ್ನು ದ್ರವ್ಯರೂಪವಾಗಿಯೋ ಅಥವಾ ಸರ್ಟಿಫಿಕೇಟ್ ರೂಪವಾಗಿಯೋ ಕೊಟ್ಟು ಇದನ್ನು ಈಗಲೇ ಮುಗಿಸಿಬಿಡಬೇಕಲ್ಲದೆ—ನಮ್ಮ ಮುಂದೆ ಬರತಕ್ಕ ಮಕ್ಕಳು ಮೊಮ್ಮಕ್ಕಳ ಮೇಲೆಲ್ಲಾ ಈ ಒಂದು ಸಾಲದ ಹೊರೆಯನ್ನು ಇಡುವುದು ಬೇಡ ಎಂದು ಹೇಳತಕ್ಕವನಾಗಿದ್ದೇನೆ—

ಇದೇ ಸಂದರ್ಭದಲ್ಲಿ ಮತ್ತೊಂದು ವಾದ ಬಂದಿದೆ. ಈ ತಸ್ದೀಕ್‌ನ್ನು ನಿರ್ಧರಿಸತಕ್ಕ ವಿಷಯವನ್ನು ಒಂದು ಜುಡಿಷಿಯಲ್ ಬಾಡಿಯ ತೀರ್ಮಾನಕ್ಕೆ ಬಿಡುವುದು ಅಗತ್ಯವೆಂದು. ಆದರೆ ಇದು ಅನಾವಶ್ಯಕ. ಆ ರೀತಿ ಏರ್ಪಾಡು ಮಾಡದಿದ್ದಾಗ್ಲೂ ಕೂಡ ಇಲ್ಲಿ ಅಂಥ ಅನ್ಯಾಯವೇನೂ ಆಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಇಂಥ ಒಂದು ಜುಡಿಷಿಯಲ್ ಟ್ರಿಬ್ಯುನಲ್ ಇಲ್ಲದೆ ತೀರ್ಮಾನ ಮಾಡಿದರೆ ಅದರಿಂದೇನೂ ಅಂಥ ಒಂದು ದೊಡ್ಡ ಪ್ರಮಾದವಾಗಲಾರದು. ಈಗ ತಮಗೆಲ್ಲರಿಗೂ ಗೊತ್ತಿರುವಹಾಗೆ ನಮ್ಮಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳೂ ಮತ್ತು ಆ ದರ್ಜೆಯ ಇತರ ಅಧಿಕಾರಿಗಳೂ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳನ್ನು ಸುಲಭವಾಗಿ ಇತ್ಯರ್ಥಮಾಡಿರತಕ್ಕದ್ದನ್ನು ನಾವೇ ನೋಡಿದ್ದೇವೆ. ಆದುದರಿಂದ ಅವರಿಗೆ ಈ ಸಮಸ್ಯೆಯನ್ನು ಬಗೆಹರಿಸತಕ್ಕದ್ದು ಅಷ್ಟೇನೂ ಅಸಾಧ್ಯವಾಗ

ಲಾರದು. ಹಾಗೂ ಒಂದುವೇಳೆ ಅಂಥಾ ತೊಂದರೆ ಯೇನಾದರೂ ಇದನ್ನು ಜಾರಿಗೆ ಕೊಡತಕ್ಕಂಥ ಕಾಲದಲ್ಲಿ ಕಂಡು ಬಂದರೆ ಆಗ ಪುನಃ ಈ ಕಾನೂನನ್ನು ಈ ಮಾನ್ಯ ಸಭೆಯಮುಂದೆ ತಂದು ಅದನ್ನು ತಿದ್ದುಪಡಿಮಾಡಲು ಅವಕಾಶವಿದೆ. ಆದ್ದರಿಂದ ಆ ಒಂದು ಕಾರಣಕ್ಕಾಗಿ ಈ ಮಸೂದೆಯನ್ನು ಮುಂದು ವರಿಸಿಕೊಂಡು ಹೋಗುವುದು ಬೇಡ ; ಹಾಗೆ ಮಾಡುವುದು ಜನರ ಹಿತದೃಷ್ಟಿಯಿಂದ ಸರಿಯಾದದ್ದಲ್ಲ. ಸರ್ಕಾರದವರು ಈಗಾಗಲೇ ಏನೊಂದು ಆಶ್ವಾಸನವನ್ನು ಆ ರೈತರಿಗೆ ಕೊಟ್ಟಿದ್ದಾರೋ ಅದಕ್ಕೆ ತಕ್ಕಂತೆ, ಈ ಸಂಬಂಧವಾಗಿ ಕೊಡತಕ್ಕ ಪರಿಹಾರವೇನಿದೆಯೋ ಅದನ್ನು ಬೇಗ ನಿರ್ಧರಿಸಿ ತೀರ್ಮಾನಕ್ಕೆ ಬೇಗ ಬರಬೇಕೇ ಹೊರತು ಸುಮ್ಮನೆ ಮೂಗಿಗೆ ತುಪ್ಪ ಹಚ್ಚಿ ವಾಸನೆ ಕುಡಿಯಿರಿ ಎಂದು ಹೇಳುವಹಾಗೆ ಮಾಡದೆ ಬೇಗ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಈ ಮಸೂದೆಗೆ ಎಲ್ಲರ ಬೆಂಬಲವೂ ಇದೆಯೆಂದು ತಿಳಿಸಿ ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ.

The House rose for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair]

Sri R. ANANTARAMAN (Chamarajpet).—I have risen to support the Bill. Most of the Members who spoke earlier to me have supported the Bill. They have also put before the House some important criticisms that will have to be answered by the Hon'ble Minister for Revenue. During the last session, there was much opposition for this Bill. In this Session, I find that the opposition has been reduced and even most of the members of the Opposition are supporting this Bill. It may be because that land reforms is quite necessary now. We must really congratulate the Minister for Revenue for having taken this bold step and brought this Bill before us. I was one of the members of the Select Committee. We have taken many days to come to this settlement. The Select Committee have presented the report after a good deal of discussion. We were fortunate to hear some of the representatives of the Mutts and some important public personages, who took much interest to come before the Committee and give their evidence. As I find, there is very little difference of opinion. It may be narrowed down to three categories. The first is the category of tenant; the second is the fixation of premium to be paid by the tenants and the third is the payment of tasdik amount.

In the previous Bill, *i.e.*, the Personal and Miscellaneous Inams Abolition Bill, a new category of tenancy was introduced. That was called the quasi-permanent tenant. In this Bill, a new category of tenancy has been introduced. They are called other kinds of tenants directly under the control of the Government. Some of our members questioned why this discrimination is made. The Hon'ble Minister has clearly explained why this discrimination had to be made. He has said that the Planning Commission were not agreeable to introducing this kind of quasi-permanent tenant. In fact, according to the definition of that word 'quasi-permanent tenant', only those tenants who have been in possession of land for six years will be entitled to get land. But according to the recent kind of tenancy introduced in this Bill, even a tenant who has been in possession of land for one year can become the owner if he minds. If he is in a position to pay the amount, *i.e.*, the premium, he will be a tenant directly under the control of the Government. As regards the kadim tenant, he need not pay any premium to the Government and he will be registered as the occupant of the land. As regards the permanent tenant, there has been a certain difference of opinion. My friends who spoke earlier to me have said—no doubt, the Hon'ble Minister has told us that there are only a few cases of permanent tenants according to the definition. But these permanent tenants, as my friends have already said, will only pay a very low premium, *i.e.*, about twenty times the land revenue. I also find that it is a very small amount that they are entitled to pay to the Government. This premium is very low. But as the Hon'ble Minister has said, since there are very few such tenants, it is immaterial whether the amount is low or high. So we will have to pay some attention towards those kinds of tenants who are directly under Government. Some of our friends have stated that when these tenants want to become owners of the land, they will have to pay a very high amount, as much as

(SRI R. ANANTARAMAN.)

Rs. 5,000 per acre or three to four thousand rupees per acre. I also feel that this is a big amount. They will not be in a position to pay so much. Therefore, should we make a discrimination between these permanent tenants and the tenants-at-will who are called the other kinds of tenants directly under the control of Government? So, we will have to pay some attention towards the lowering of the premium to be paid by these tenants.

As regards the payment of the tasdik allowance, some of my friends have stated that that amount should not be paid to these institutions. Two views have been placed before us. Suppose, tasdik allowance is not paid to the temples, some of our friends honestly believe that the institutions will not exist at all. In fact, all institutions will have to be closed. Supposing we pay some compensation to these temples for having taken away the land, some of my friends feel that that amount will be mis-spent or distributed by the Dharmadarsis of those temples. As you know, last year, there was a Supreme Court Judgment in which it has been held that the Government cannot interfere with the internal administration of these temples or their management. Supposing the Dharmadarsis squander away the money, then Government will be helpless and the whole amount will be mis-spent and the purpose for which this amount is paid will be in vain. So, it is better that some tasdik amount is paid for the maintenance of these temples. Some of my friends have said that the same amount should be paid annually or monthly and I also feel in the same way. Some of my friends said that this tasdik amount will have to be paid from the Exchequer of the State. No doubt, it is true. As some of my friends said, every year, a good bit of amount will have to be paid. But Government will be getting a small premium from the tenants who have to be registered as tenants. So, it is better that the premium to be got from these tenants be raised. I, therefore, feel that it is better, every year, some tasdik amount is paid to these institutions in the form of these allowances. Otherwise, I am sure, all the institutions will have to be closed, and they will be closed early because of the mismanagement. As we find in the case of many co-operative societies which are managed by public persons—they have not been managed well because Government is not directly connected with them—likewise, if these temples are not controlled by the Government, they will have to be closed. I suggest it is better that the report of the Select Committee is borne in mind by the members and the tasdik allowance paid to these institutions.

I do not want to say much except congratulate the members of the Select Committee for taking so much trouble to suitably amend the whole original Bill itself. I am sure that this Bill will be whole-heartedly supported by the members of this august House. With these words, I close.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ನಿನ್ನೆಯಿಂದಲೂ ಈ ಇನಾಮ್ ಬಿಲ್ಲಿನಮೇಲೆ ನಮ್ಮ ಸಹೋದರರನೇಕರು ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ಬಹುಶಃ ಜನರು ಇಂಗ್ಲಿಷ್‌ನಲ್ಲಿ ಮಾತನಾಡಿದ್ದಾರೆ, ಅದರಿಂದ ಈ ಬಿಲ್ಲಿನ ವಿಷಯದಲ್ಲಿ ನಾನು ಮಾತನಾಡಬೇಕೆಂದರೆ ಸ್ವಲ್ಪ ಕಷ್ಟವಾದೀತೆಂದು ಸುಮ್ಮನಿದ್ದೆ. ಆದರೆ ಕನ್ನಡದಲ್ಲಿ ಮಾತನಾಡಿದವರ ಮಾತುಗಳನ್ನು ಕೇಳಿದಮೇಲೆ ನಾನೂ ಎರಡು ಮಾತನ್ನು ಹೇಳಬೇಕೆಂದಿಚ್ಛಿಸಿ ಎದ್ದಿದ್ದೇನೆ.

ಈ ದಿವಸ ಇಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂದು, ಯಾವ ದೇಶದ ಹಿತವನ್ನು ಸಾಧಿಸುವುದಕ್ಕೆ ಈ ಬಿಲ್ಲನ್ನು ತಂದಿದ್ದೇವೆಂಬುದನ್ನು ಯೋಚನೆ ಮಾಡೋಣ. ನಮ್ಮ ಮಂತ್ರಿಗಳು ಇಂಥಾ ಒಂದು ಒಳ್ಳೆಯ ಬಿಲ್ಲನ್ನು ತಂದಿದ್ದಾರೆ, ಇದಕ್ಕಾಗಿ ಬಹಳ ಸಂತೋಷ. ಇದಕ್ಕೆ ಹಿಂದಿನಿಂದಲೂ ಬೆಂಬಲ ಕೊಟ್ಟಿದ್ದೇವೆ. ಹೀಗಿರುವಾಗ ಈ ಹೊತ್ತು ಇದು ಪಾಸಾಗದಿದ್ದರೆ ನಮಗೆ ಮನಸ್ಸಿಗೆ ಬಹಳ ಅಸಮಾಧಾನವಾಗುತ್ತದೆ. ಹಿಂಜುತ್ತಾ ಹಿಂಜುತ್ತಾ ಈ ಬಿಲ್ಲನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗುವುದು ! ಈ ಸಭೆಯ ಸದಸ್ಯರಲ್ಲಿ ಹೆಚ್ಚುಜನ ಲಾಯರುಗಳಿರುವುದರಿಂದ, ಇದನ್ನು ಅಸಾಧ್ಯವಾಗಿ ಎಂಗಡಿಸುತ್ತಿದ್ದಾರೆ ; ಇದಕ್ಕೆ ಅತಿಯಾದ ಬುದ್ಧಿಯೋ ಕಾರಣವೊ ಏನೋ ಎನಿಸುತ್ತದೆ ನನಗೆ ! ವಿದ್ಯೆ ಕಲಿತದ್ದೇನೋ ನ್ಯಾಯವೆ, ಅಲ್ಲವೆಂದು ಹೇಳುವಹಾಗಿಲ್ಲ. ಇಂಗ್ಲಿಷಿನಲ್ಲಿ ಒಂದು ಮಾತು ಹೇಳುತ್ತಾರೆ, ಮನುಷ್ಯ ಕಾನೂನು ಮಾಡುತ್ತಾ ಮಾಡುತ್ತಾ ಹೋದರೆ ಕೊನೆಗೆ ಆ ಕಾನೂನುಗಳೇ ಮನುಷ್ಯನನ್ನು ಸುತ್ತಿಕೊಳ್ಳುತ್ತವೆಂದು ಹೇಳುತ್ತಾರೆ. ಆದುದರಿಂದ, ಕಾನೂನಿನ ಅವಶ್ಯಕತೆ ಎಷ್ಟುಬೇಕೋ ಅಷ್ಟು ಮಾತ್ರ ಇಟ್ಟುಕೊಳ್ಳಬೇಕು. ಇಂಥಾ ಒಂದು ಒಳ್ಳೆಯ ಮತ್ತು ಅವಶ್ಯಕವಾದ ಕಾನೂನನ್ನು ಹಿಂಜಿಹಿಂಜಿ ಹಿಂದೆ ತಳ್ಳುತ್ತಾ ಹೋದರೆ ದೇಶಕ್ಕೆ ಅನ್ಯಾಯವಾಗುವುದಿಲ್ಲವೆ ಎಂದು ಕೇಳುತ್ತೇನೆ. ನಮ್ಮ ದೇಶಕ್ಕೂ ಜನರಿಗೂ ಹಿತ

ವಾಗಬೇಕು, ದೈವಭಕ್ತಿ ಇರಬೇಕು, ಸುಲಭವಾಗಿ ಜನರಿಗೆ ಅರ್ಥವಾಗಬೇಕು, ಪ್ರಯೋಜನವಾಗಿರಬೇಕು ; ಈ ರೀತಿ ಕಾನೂನನ್ನು ರಚನೆಮಾಡಿ, ಎಷ್ಟು ಸುಲಭವಾಗಿ ಮಾಡಬಹುದೋ ಅಷ್ಟು ಮಾಡದೆ ಮೂರು ವರ್ಷದಿಂದ ವಾದ ಮಾಡುತ್ತಿದ್ದಾರೆ. ವಿದ್ಯಾವಂತರ ಬುದ್ಧಿ ಹೇಗೆ ತೀಕ್ಷ್ಣವಾಗಿರುತ್ತದೆಂದರೆ, ಎರಡು ಅಲಗಿನ ಕತ್ತಿ ಇದ್ದ ಹಾಗಿರುತ್ತದೆ. ಅದರಿಂದಲೇ ಮೂರು ವರ್ಷಗಳಿಂದ ವಾದ ವಿವಾದಗಳು ನಡೆಯುತ್ತಿವೆ ಈ ಬಿಲ್ಲಿನಮೇಲೆ.

ಒಬ್ಬ ಸದಸ್ಯರು.—ಐದು ವರ್ಷಗಳಿಂದ ನಡೆಯುತ್ತಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಐದುವರ್ಷಗಳಿಂದ! ವಿದ್ಯದ ಬಲ ಮತ್ತು ಪ್ರಭಾವವನ್ನು ತೋರಿಸಬೇಕೆಂದು ಹೀಗಾಗುತ್ತಿದೆಯೆಂದು ನನಗೆ ಕಾಣುತ್ತದೆ. ಈ ಹವ್ಯಾಸ ನಮಗೆ ಬೇಡ. ಸಾಧ್ಯವಾದ ಮಟ್ಟಿಗೂ ಜನರಿಗೂ ದೇಶಕ್ಕೂ ಹಿತವಾಗುವ ರೀತಿಯಲ್ಲಿ, ದೈವಭಕ್ತಿಯನ್ನಿಟ್ಟುಕೊಂಡು ಕೆಲಸಮಾಡಲು ಸರ್ವ ಸಮ್ಮತದಿಂದ ಒಪ್ಪಿಕೊಳ್ಳೋಣ. ಈ ಸಂದರ್ಭದಲ್ಲಿ ದೈವಭಕ್ತಿಯ ವಿಚಾರವನ್ನು ತಂದಿದ್ದಾರೆ ; ಇನ್ನೊಬ್ಬರು ದೈವ ಭೀತಿಯನ್ನು ಎತ್ತಿದ್ದಾರೆ. ಇಂಥ ಒಂದು ಕಾನೂನು ಮಾಡುವಾಗ ಈ ರೀತಿಯಲ್ಲಿ ಮಾಡುವುದು ನ್ಯಾಯವೆ ಎಂದು ಕೇಳಬೇಕಾಗಿದೆ ದೇವರಿಲ್ಲವೆಂದು ತಿಳಿದುಕೊಳ್ಳಬಾರದು. ಶ್ರೀಮಾನ್ ರಾಮಯ್ಯನವರು ಇಂಗ್ಲಿಷಿನಲ್ಲಿ ಮಾತನಾಡಿದ್ದರಲ್ಲಿ ಕೆಲವು ವಿಷಯಗಳನ್ನು ಹೇಳಿದರು. ನಾನು ಅರ್ಥಮಾಡಿಕೊಂಡದ್ದರಮೇಲೆ ಹೇಳುತ್ತೇನೆ. ದೇವರು ಎಲ್ಲೆಲ್ಲಿಯೂ ಇದ್ದಾನೆ. ಇಲ್ಲಿಯೂ ಇದ್ದಾನೆ. ದೇವರು ಯಾರಲ್ಲಿಲ್ಲ? ಪೂರ್ವದಲ್ಲಿ ಭಕ್ತಿ ಹೆಚ್ಚರೆಂದೂ ಮನುಷ್ಯ ಅಡ್ಡದಾರಿಯಲ್ಲಿ ಹೋಗದೆ ನೀತಿಮಾರ್ಗದಲ್ಲಿ ನಡೆದುಕೊಂಡು ಹೋಗಲೆಂದೂ ಕೆಲವು ವ್ಯವಸ್ಥೆಗಳನ್ನು ಮಾಡಿದರು. ದೇಶಕ್ಕೆ ಮತ್ತು ಜನರಿಗೆ ಅಹಿತವಾಗುವ ಯಾವುದನ್ನು ಮಾಡಿದರೂ ಅದರಲ್ಲಿ ದೇವರಿಲ್ಲ. ಅಂಥಾದ್ದನ್ನು ಯಾರೂ ನಂಬಬಾರದು. ನಾವು ಯಾವಾಗಲೂ ಬತ್ತಕ್ಕಾಗಿ ನೀರು ಹಾಕುತ್ತೇವೆ. ಆದರೆ ಬತ್ತದ ಪೈರಿನ ಜೊತೆಗೆ ಹುಲ್ಲೂ ಬೆಳೆಯುತ್ತದೆ. ಇದು ಸೃಷ್ಟಿನಿಯಮ. ನಾವು ಕೆಲವು ಒಳ್ಳೆಯ ಕಾನೂನುಗಳನ್ನು ಮಾಡುವುದಕ್ಕೆ ಹೋದರೆ ಕೆಲವು ತೊಂದರೆಗಳು ಬರುತ್ತವೆ. ಅವುಗಳನ್ನು ಸಹಿಸಿಕೊಳ್ಳಬೇಕು. ಯಾವ ತಪ್ಪನ್ನೂ ಮಾಡದೇಯಿರುವುದಕ್ಕೆ ಸಾಧ್ಯವಾಗುವುದಿಲ್ಲ. ನಾಣ್ಯಕ್ಕೂ ಎರಡು ಮುಖಗಳಿವೆ. ಹಾಗೆ ಇವೊತ್ತು ನಾವು ರಚನೆ ಮಾಡತಕ್ಕ ಕಾನೂನು ಸರ್ವರಿಗೂ ಸಹಾಯವಾಗಿರಬೇಕು. ದೇವರಲ್ಲಿ ದೈವಭಕ್ತಿ ಎಷ್ಟರಮಟ್ಟಿಗೆ ಇಟ್ಟುಕೊಳ್ಳಬೇಕೆಂಬುದನ್ನು ನಾವು ಯೋಚನೆಮಾಡಬೇಕು. ದೇವರು ಎಲ್ಲಿತಾನೇ ಇಲ್ಲ! ಪ್ರಹ್ಲಾದ ತೋರಿಸಿದ ಕಂಭದಲ್ಲಿ ಇಲ್ಲವೇನು? ಇಲ್ಲಿ ಜನರ ಕುಂದುಕೊರತೆಗಳನ್ನು ಚಿತ್ರಿಸಿ ಸರ್ಕಾರದ ಮುಂದೆ ಇರುವ ಈ ಸಭಾ ಸದಸ್ಯರಾದ ನಮ್ಮಲ್ಲಿ ದೇವರು ಇಲ್ಲದೆ ಮತ್ತೆ ಯಾರಲ್ಲಿ ಇದ್ದಾರೆ. ಇಂತಹ ಸಭೆಯಲ್ಲಿ ಮಾತನಾಡುವ ತಮ್ಮಂತಹ ಮಹನೀಯರ ಹೃದಯದಲ್ಲಿ ದೇವರು ಇಲ್ಲದೆ ಮತ್ತೆಲ್ಲಿ ಇರುತ್ತಾನೆ? ಜನರ ಕಷ್ಟವನ್ನು ಅರಿತು ಅವರ ಯೋಗಕ್ಷೇಮವನ್ನು ಮತ್ತು ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕಾದರೆ ದೇವರು ನಮ್ಮಲ್ಲಿ ಇಲ್ಲದೆ ಇನ್ನೆಲ್ಲಿಂದ ಬರಬೇಕು? ಶೃಂಗೇರಿಯಲ್ಲಿದ್ದಂತಹ ದೇವರು ಇದ್ದಾರೆಯೇ? ಧರ್ಮಶಾಲೆಯಲ್ಲಿ ದೇವರು ಇದ್ದಾರೆಂದು ಹೇಳುತ್ತೇನೆ. ನೇತ್ರಾವತಿ ನದಿಯೊಳಗೆ ಇರುವ ಚಿನ್ನವನ್ನು ಮುಟ್ಟಿದರೆ ಭೂತ ಬರುತ್ತದೆಂದು ಹೇಳಿದ್ದಾರೆ. ಅಲ್ಲಿಂದ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಚಿನ್ನವನ್ನು ಬ್ರಿಟಿಷರು ತೆಗೆದುಕೊಂಡು ಹೋದಾಗ ಮಂಜುನಾಥದೇವರು ಸುಮ್ಮನೆ ಅವರನ್ನು ಏತಕ್ಕೆ ಬಿಟ್ಟರು? ಹಾಗೆ ದೇವರಲ್ಲಿ ವಿಶ್ವಾಸ ಇಡುವಕಾಲ ಹೋಯಿತು.

ದೇವಸ್ಥಾನಕ್ಕೆ ಹೋಗಿ ಪೂಜೆ, ನಮಸ್ಕಾರಮಾಡಿದರೆ, ದೇವರು ಏತಕ್ಕೆ ಮಾತನಾಡುವುದಿಲ್ಲ ಎಂದು ಮಕ್ಕಳು ಪ್ರಶ್ನೆಯನ್ನು ಹಾಕುತ್ತಾರೆ. ಇಂತಹ ಕಾಲಬಂದಿದೆ. ದೇವರು ಧರ್ಮ, ಇವೆಲ್ಲದರಲ್ಲಿಯೂ ವಿಶ್ವಾಸವನ್ನು ಇಡುವುದು ಬೇಡ ಎಂದು ಹೇಳುವುದಿಲ್ಲ. ಆದರೆ ಈ ಬಿಲ್ಲನ್ನು ಹಿಂದಕ್ಕೆ ತಳ್ಳುವುದು ಬೇಡವೆಂದು ಹೇಳುತ್ತೇನೆ. ದೇಶಕ್ಕೂ ಜನರಿಗೂ ಹಿತವಾಗಬೇಕು. ಎಲ್ಲರಿಗೂ ಒಂದೇ ಸಮಾನವಾದ ಕಾನೂನು ಮಾಡಬೇಕು. ಒಬ್ಬನಿಗೆ ಹೆಚ್ಚು ಒಬ್ಬನಿಗೆ ಕಮ್ಮಿ ಇರಬಾರದು. ಆದ್ದರಿಂದ ಈ ಬಿಲ್ಲಿಗೆ ಬೆಂಬಲ ಕೊಟ್ಟು ಅದನ್ನು ಪಾಸ್ ಮಾಡಬೇಕು. ಹಿಂದಕ್ಕೆ ಹಾಕಬಾರದೆಂದು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಐದು ವರುಷಗಳಿಂದ ಈ ಬಿಲ್ಲನ್ನು ಪಾಸ್‌ಮಾಡಬೇಕೆಂದು ಮಂತ್ರಿಗಳು ಪ್ರಯತ್ನಮಾಡುತ್ತಿದ್ದಾರೆ. ಇದಕ್ಕೆ ತಮ್ಮ ಸಹಾನುಭೂತಿಯನ್ನು ಕೊಟ್ಟು ಒಂದೆರಡು ತಿದ್ದುಪಡಿಗಳು ಇದ್ದರೆ ಅದನ್ನು ಮಾಡಿ. ಶ್ರೀ ಭೀಮಪ್ಪನಾಯಕರು ಮತ್ತು ಶ್ರೀ ಚನ್ನಬಸಪ್ಪನವರು ಕೊಟ್ಟಿರುವ ಸೂಚನೆಗಳು ಸರಿಹೋಗುತ್ತವೆಯೋ ಇಲ್ಲವೋ ಎಂಬುದನ್ನು ಯೋಚನೆ ಮಾಡಿ ಆಮೇಲೆ ಈ ಬಿಲ್ಲನ್ನು ಪಾಸ್‌ಮಾಡಿ, ಹಿಂದಕ್ಕೆ ಹಾಕಬೇಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ಈಗ ನಮ್ಮ ಮುಂದೆ ಇರತಕ್ಕಂಥ ಮಸೂದೆ ವಿಷಯದಲ್ಲಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಯಾವ ಅಭಿಪ್ರಾಯವನ್ನು ಕೊಟ್ಟಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಈಗ ತಾನೆ ಆವಡಿ ಅಧಿವೇಶನದಲ್ಲಿ ಸಮತಾವಾದದ ತಳಹದಿ ಮೇಲೆ ರಾಜ್ಯ ನಿರ್ಮಾಣಮಾಡಬೇಕೆಂದು ಕಾಂಗ್ರೆಸ್ ಸಂಸ್ಥೆ ಕಂಕಣಬದ್ಧವಾಗಿದೆ. ಜನರಿಂದ ಚುನಾಯಿಸಿದ ಈ ಸಂಸ್ಥೆಯ ಸರಕಾರ ಇರುವಾಗ ಅಂತಹ ಪ್ರಗತಿದಾಯಕವಾದ ಕಾನೂನನ್ನು ಕುಂಠಿತವಾಗುವಂತೆ ಮಾಡುವುದು ಅವರ ತತ್ವಕ್ಕೆ ಅಸಮಂಜಸವಾಗುತ್ತದೆ ಮತ್ತು ವಿರುದ್ಧವಾಗುತ್ತದೆ. ಆದ್ದರಿಂದ ಇಂತಹ ಮಸೂದೆಯ ವಿಷಯದಲ್ಲಿ ಸಂಶಯಗಳಿಗೆ ಎಡೆ ಕೊಡಬಾರದು ಎಂದು ತಿಳಿಸುತ್ತೇನೆ. ಈಗಾಗಲೇ ಈ ಸಭೆ ಸರ್ವಾನುಮತದಿಂದ ಪಾಸ್ ಮಾಡಿರತಕ್ಕಂಥ Personal ಮತ್ತು Miscellaneous ಇನಾಂ ಬಿಲ್ಲು ಇನ್ನೂ ರಾಷ್ಟ್ರಾಧ್ಯಕ್ಷರಿಂದ ಅನುಮತಿ ಪಡೆಯದೆ ಕಾನೂನು ಆಗದೆ ಇರುವುದು ಅನೇಕ ಸಂಶಯಗಳಿಗೆ ಎಡೆಕೊಟ್ಟಿದೆ. ಅಂತಹುದರಲ್ಲಿ ಈ ಸಮತಾವಾದದ ಕಡೆಗೆ ಧಾವಿಸಿ ಬರತಕ್ಕಂಥ ಕಾಂಗ್ರೆಸ್ ಸಂಸ್ಥೆ ಮತ್ತು ಇದರಿಂದ ಸ್ಥಾಪಿಸಲ್ಪಟ್ಟಿರತಕ್ಕಂಥ ಸರ್ಕಾರ ಈ ವಿಷಯದಲ್ಲಿ ಅತಿ ಜಾಗ್ರತೆಯಾಗಿ ಪ್ರಗತಿಶೀಲವಾದ ಕಾನೂನುಗಳನ್ನು ತರುವುದರಲ್ಲಿ ಏನು ಅಡಚಣೆಗಳು ಬಂದರೂ ಕೂಡ ಹಿಂದುಳಿಯಬಾರದೆಂದು ಹೇಳುತ್ತೇನೆ. ಯಾವ ಕಾನೂನನ್ನು ಮಾಡಿದರೂ ಕೂಡ ಈ ಸಭೆಯಲ್ಲಿರತಕ್ಕಂಥ ಸುಮಾರು 104 ಜನರ ಮನಸ್ಸನ್ನು ಒಂದುಗೂಡಿಸುವ ರೀತಿಯಲ್ಲಿ ಯಾವ ಕಾನೂನನ್ನೂ ರಚಿಸಲು ಸಾಧ್ಯವಿಲ್ಲ. ಒಬ್ಬೊಬ್ಬರ ಭಾವನೆ ಒಂದೊಂದು ರೀತಿಯಲ್ಲಿರುತ್ತದೆ.

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ಯಾವ ಕಾನೂನನ್ನು ಕೂಡ ಎಲ್ಲಾ ಜನರ ಸಮ್ಮತಿಯನ್ನು ಪಡೆದು ಲೋಪದೋಷಗಳು ಇಲ್ಲದಂತೆ ರಚಿಸುವುದಕ್ಕಾಗುವುದಿಲ್ಲ. ಕಾನೂನುಗಳಲ್ಲಿ ಲೋಪದೋಷಗಳು ಇದ್ದೇ ಇರುತ್ತವೆ. ಆದರೆ ಅದನ್ನು ಜಾರಿಗೆ ತಂದಾಗ ಅದರಲ್ಲಿ ಏನಾದರೂ ಲೋಪದೋಷಗಳು ವ್ಯಕ್ತವಾದರೆ ಅವು ಸರ್ಕಾರದ ಗಮನಕ್ಕೆ ಅಥವಾ ಸಭೆಯ ಗಮನಕ್ಕೆ ಬಂದಾಗ ಆಗ್ಗೆ ಸೂಕ್ತವಾದ ತಿದ್ದುಪಡಿಗಳನ್ನು ಮಾಡುವ ಅವಕಾಶ ಈ ಸಭೆಗೆ ಇದ್ದೇ ಇದೆ. ಅಂಥಾದ್ದರಲ್ಲಿ ಮೊದಲು ಸರ್ಕಾರದಿಂದಲೇ ಮಂಡಿಸಲ್ಪಟ್ಟಿದ್ದ ಈ ಮಸೂದೆ ಸೆಲೆಕ್ಟ್ ಸಮಿತಿ ಪರಿಶೀಲನೆಗೆ ಹೋಗಿ, ಅವರಿಂದ ತಿದ್ದುಪಡಿಯಾದ ಮಸೂದೆ ಈ ಸಭೆಯಲ್ಲಿ ಮಂಡಿಸಲ್ಪಟ್ಟು, ಅನೇಕ ಮಹನೀಯರು ತಮ್ಮ ಅಭಿಪ್ರಾಯವನ್ನು ಅದರ ಮೇಲೆ ಈಗಾಗಲೇ ವ್ಯಕ್ತಪಡಿಸಿದ್ದಾರೆ. ಎಲ್ಲಾ ಮಾನ್ಯ ಸದಸ್ಯರೂ ಮಾತನಾಡಿದ್ದರ ತಿರುಳನ್ನು ನೋಡಿದರೆ ಬುಡ ಮೇಲುಮಾಡುವ ಮಾರ್ಪಾಡು ಮಾಡಬೇಕೆಂದು ಅವರು ತಿಳಿಸಲಿಲ್ಲವೆಂದು ಭಾವಿಸುತ್ತೇನೆ. ಅಲ್ಪಸ್ವಲ್ಪ ಮಾರ್ಪಾಡುಗಳನ್ನು ಮಾಡಬೇಕೆಂದು ಮಾತ್ರ ಅವರು ಹೇಳಿದ್ದಾರೆ. ಈ ದೃಷ್ಟಿಯಿಂದ ಅಲ್ಪಸ್ವಲ್ಪ ವ್ಯಾತ್ಯಾಸಗಳು ಇದ್ದರೆ ಅವನ್ನು ಈ ಬಿಲ್ಲಿನಲ್ಲಿ ಅಳವಡಿಸಬೇಕು. ಈ ಸಭೆ ಮುಕ್ತಾಯ ಆಗುವದಕ್ಕೆ ಮೊದಲೇ ಇದನ್ನು ರಾಷ್ಟ್ರಾಧ್ಯಕ್ಷರ ಅಪ್ಪಣೆಪಡೆದು ಕಾನೂನು ಮಾಡುವುದರಲ್ಲಿ ಸತತ ಸರ್ಕಾರ ಪ್ರಯತ್ನಮಾಡಬೇಕು. ಆರೀತಿ ಮಾಡಲು ಸರ್ಕಾರಕ್ಕೆ ಏನಾದರೂ ಅಡ್ಡಿತಡೆಗಳು ಈ ಸಭೆ ತಂದರೆ ಈ ಸಭೆ ಮತ್ತು ಸರ್ಕಾರ ಪ್ರಗತಿಶೀಲವಾಗಿಲ್ಲ, ಇದು ಇನ್ನೂ ಅವನತಿಕಡೆಗೆ ಧಾವಿಸಿ ಹೋಗುತ್ತದೆಂದು ಹೇಳಬೇಕಾಗುತ್ತದೆ. ಆದ್ದರಿಂದ ನಾನು ಮೊದಲೇ ತಿಳಿಸಿದಂತೆ ಹೆಚ್ಚಿನ ಮಾರ್ಪಾಡುಗಳು ಅನಾವಶ್ಯಕವಾಗಿವೆಯೆಂದು ಭಾವಿಸುತ್ತೇನೆ. ಅಲ್ಪಸ್ವಲ್ಪ ಮಾರ್ಪಾಡುಗಳನ್ನು ಮಾಡಿ ಈ ಮಸೂದೆಯನ್ನು ಕಾನೂನಾಗಿ ಮಾಡುವುದಕ್ಕೆ ಅವಶ್ಯಕವಿದೆ. ಈಗಾಗಲೆ ಸರ್ಕಾರದ ಗಮನಕ್ಕೆ ಅನೇಕ ವಿಷಯಗಳನ್ನು ಈ ಸಭೆ ತಂದಿದೆ ಮತ್ತು ಈ ಮಸೂದೆಯಲ್ಲಿ ದೇವಾಲಯಗಳು ಮತ್ತು ಮಠಗಳಿಗೆ ತಸ್‌ದೀಕ್ ಕೊಡುವ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಅತಿರೇಕವಾದ ಅಭಿಪ್ರಾಯಗಳು ಕೆಲವು ಮಾನ್ಯ ಸದಸ್ಯರಿಂದ ಬಂದಿವೆ. ಈ ಎರಡು ದೃಷ್ಟಿಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ಅಂತಹ ಸಂಸ್ಥೆಗಳು ಉಳಿಯುವಂತೆಯೂ ಅವುಗಳನ್ನು ಬುಡ ಮೇಲು ಮಾಡಿ ಕಿತ್ತುಹಾಕದಂತೆಯೂ ನೋಡಿಕೊಳ್ಳಬೇಕು. ಈ ಮಸೂದೆಯಲ್ಲಿ ಒಂದು ಏರ್ಪಾಡನ್ನೂ ಒಂದು ರಕ್ಷಣೆಯನ್ನೂ ಇಂತಹ ಸಂಸ್ಥೆಗಳಿಗೆ ಕೊಡುವುದು ಸೂಕ್ತ. ಅಂತಹ ರಕ್ಷಣೆ ಇರಬೇಕಾದುದು ಅಗತ್ಯ. ಅದನ್ನು ತಸ್‌ದೀಕ್ ಎಂದು ಬೇಕಾದರೂ ಕರೆಯಿರಿ. ಅಂತೂ ಸಂಸ್ಥೆ ಹೆಸರಿನಲ್ಲಿ ಒಂದು ನಿಧಿ ಏರ್ಪಡಿಸಿ. ಆ ನಿಧಿಯಿಂದ ಬಂದ ಉತ್ಪತ್ತಿಯಿಂದ ಆ ಸಂಸ್ಥೆಯು ನಡೆಯುವ ಹಾಗೆ ಬೇಕಾದರೂ ಏರ್ಪಾಡು ಮಾಡಿ. ಈ ಸಂಸ್ಥೆಗಳು ಕೆಲವುಕಾಲ ನಡೆದುಕೊಂಡು ಬರುವಂತೆ ರಕ್ಷಣೆ ಕೊಡುವುದು ಒಳ್ಳೆಯದು. ಶ್ರೀ ಶಂಕರಾಚಾರ್ಯರು ಅದ್ವೈತವಾದಿಗಳ ಸಂಸ್ಥೆ ಇರಬೇಕೆಂದು ಅವರು ಇಷ್ಟಪಟ್ಟಿಲ್ಲ. ಶಂಕರಾಚಾರ್ಯರು ಹಚ್ಚಿದ ಜ್ಯೋತಿ ಕುಂದದಂತೆ ನೋಡಿಕೊಂಡರೆ ಸಾಕು ಎಂದು ಒಬ್ಬರು ಮಾನ್ಯ ಸದಸ್ಯರು ಹೇಳಿದರು. ಈ ಸಂಕುಚಿತ ದೃಷ್ಟಿಯಿಂದ ಸಂಸ್ಥೆಗಳು ನಡೆದುಕೊಂಡು ಬರಬೇಕೆನ್ನುವುದಾದರೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಶ್ರೀ ಶಂಕರಾಚಾರ್ಯರ ತತ್ವ ವಿಶ್ವವ್ಯಾಪಿಯಾಗಿರತಕ್ಕಂಥ ತತ್ವ. ಆ ತತ್ವವನ್ನು, ದೇಶದಲ್ಲಿ ಸ್ಥಾಪನೆ ಮಾಡಿದರು. ಶಾಶ್ವತವಾಗಿ ಆ ತತ್ವದಿಂದ ಭಾರತ ದೇಶಕ್ಕೆ ಕೀರ್ತಿಬರಬೇಕಾದರೆ ಅಂಗಳದಲ್ಲಿ ದೀಪವನ್ನು ಹಚ್ಚಿದರೆ ತಮ್ಮ ಕರ್ತವ್ಯ ಮಾಡಿದಂತಾಗುವುದಿಲ್ಲ. ಆ ತತ್ವವನ್ನು ಎಲ್ಲರಿಗೂ ತಿಳಿಯುವಂತೆ ಮಾಡುವುದಕ್ಕೆ ಹಣಕಾಸಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಮಹಾತ್ಮ ಗಾಂಧಿಯವರು ಗತಿಸುವುದಕ್ಕಿಂತ ಮುಂಚೆ ಒಂದು ಸ್ಮಾರಕ ಮತ್ತು ಪ್ರತಿಷ್ಠೆಯನ್ನು ಮಾಡಬೇಕೆಂದು ಅವರು ಹೇಳಿರಲಿಲ್ಲ. ಆದರೆ ಮಹಾತ್ಮ ಗಾಂಧಿಯವರು ಸಾಕ್ಷಾತ್ ದೇವರ ಅವತಾರಪುರುಷರು, ಯುಗಪುರುಷರು. ಅವರು ಸಾರಿದ ತತ್ವ ನಮ್ಮ ಮುಂದಿನ ಪೀಳಿಗೆಯಲ್ಲಿ ಉಳಿಯಬೇಕಾದರೆ ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕಾದುದು ಅಗತ್ಯ. ಅವರ ತತ್ವ ಮುಂದಿನ ಪೀಳಿಗೆಗೂ ನೆನಪಿನಲ್ಲಿರುವಂತೆ ಇಡೀ ರಾಷ್ಟ್ರದಲ್ಲಿ ಅವರ ಪ್ರತಿಮೆ ಮತ್ತು ಸ್ಮಾರಕಗಳನ್ನು ರಚಿಸುತ್ತಿಲ್ಲವೇನು ? ಅದನ್ನು ಮಾಡುವುದು ಧರ್ಮ. ಅದರಂತೆಯೇ ನಮ್ಮ ಸಂಸ್ಕೃತಿಯನ್ನು ರೂಪಿಸುವ, ರೂಢಿಸುವ ಮತ್ತು ಪೋಷಿಸುವ ಸಂಸ್ಥೆಗಳನ್ನು ಕಾಪಾಡಬೇಕಾದದ್ದು ಸರ್ಕಾರದ ಕರ್ತವ್ಯ. ನಮ್ಮ ಶರೀರದಲ್ಲಿಯೇ ದೇವರು ಇದ್ದಾರೆ, ನಮ್ಮನ್ನು ನಾವು ನೋಡಿಕೊಂಡರೆ ಸಾಕು, ದೇವರು ನನಗೆ ರಕ್ಷಣೆ ಬೇಕೆಂದು ಕೇಳಲಿಲ್ಲ ಎಂದು ಕೆಲವರು ಹೇಳಿದರು. ಅದೂ ಕೂಡ ಅತಿರೇಕವಾದ ಭಾವನೆ ಎಂದು ಭಾವಿಸುತ್ತೇನೆ. ಭಾರತದ ಸಂಸ್ಕೃತಿ ಎಂದರೆ ವಿಶ್ವವಿಖ್ಯಾತವಾದುದು. ಆ ಸಂಸ್ಕೃತಿಯನ್ನು ರೂಢಿಸಬೇಕಾಗಿದೆ, ಪೋಷಣೆಮಾಡಬೇಕಾಗಿದೆ! ಇವತ್ತಿನ ದಿವಸ ದೇವಸ್ಥಾನಗಳು, ಮಠಗಳು ಇವೆ, ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಸಂಸ್ಕೃತಿಗಾಗಿ ಖರ್ಚುಮಾಡುವ ಕಾಲದಲ್ಲಿ ಈ ದೇವಸ್ಥಾನಗಳನ್ನೂ ಮಠಗಳನ್ನೂ ಕ್ರಾಂತಿಕಾರಕವಾದ ರೂಪದಲ್ಲಿ ಬುಡಮೇಲುಮಾಡಿ ಕಿತ್ತುಹಾಕುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ತಾಯಿತಂದೆಗಳು ಮಕ್ಕಳನ್ನು ಹುಟ್ಟಿಸಿ ಅವಕ್ಕೆ ಅಂಗಿ ಬಟ್ಟೆಯನ್ನು ಒದಗಿಸುವುದು ಅವರ ಕರ್ತವ್ಯವಲ್ಲವೇ ? ಅವರನ್ನು ಹೆಚ್ಚು ಪ್ರೇಮದಿಂದ ಕಾಪಾಡುತ್ತಾರೆ. ಅಂದರೆ ತಂದೆತಾಯಿಗಳು ಏತಕ್ಕೆ ಜವಾಬ್ದಾರಿ ವಹಿಸಬೇಕೆಂದು ಹೇಳಿದಹಾಗಾಗುತ್ತದೆ. ಹುಟ್ಟಿಸಿದ ತಂದೆಗಳ ಗುರುತೇ ಇಲದೆ ಎಷ್ಟೋ ಮಕ್ಕಳು ಬೀದಿಯ ಭಿಕಾರಿಗಳಾಗಿದ್ದರೂ ದೇವರು ಅವರನ್ನು ರಕ್ಷಿಸುತ್ತಿಲ್ಲವೆ ಎಂಬ ತತ್ವದ ಆಧಾರದ ಮೇಲೆ ತಂದೆ ತಾಯಿಗಳ ಮೇಲೆ ಮಕ್ಕಳನ್ನು ಪೋಷಿಸುವ ಜವಾಬ್ದಾರಿಯನ್ನೇಕೆ ಹೊರಿಸಬೇಕು ಎಂದಂತಾಗುತ್ತದೆ, ದೇವಸ್ಥಾನಗಳನ್ನು ದೇವರೆ ನೋಡಿಕೊಳ್ಳುತ್ತಾನೆ ಎಂದು ಹೇಳಿದರೆ. ಸಂಸ್ಕೃತಿಗೆ ಪೋಷಕವಾದ ಈ ಸಂಸ್ಥೆಗಳನ್ನು ಕ್ರಾಂತಿಕಾರಕವಾದ ರೀತಿಯಲ್ಲಿ ಕಿತ್ತು ಎಸೆಯುವುದಕ್ಕೆ ಆಗುವುದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಕೇವಲ ಹೊನ್ನೇ ದೇವರು ಎಂದು ಕಂಡಿರುವವರಿಗೆ ಮಾತ್ರ ಸಮಂಜಸವಾಗುತ್ತದೆ. ಇದು ಭಾರತದ ಸಂಸ್ಕೃತಿಗೆ ತೀರ ವಿರುದ್ಧವಾಗುತ್ತದೆ. ಆದ್ದರಿಂದ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೆ ಅವನ್ನು ಮಾರ್ಪಾಡು ಮಾಡಬೇಕೆಂದು, ಈ ಮಸೂದೆಯನ್ನು ಖಂಡಿತವಾಗಿ ಈ ಸಭೆ ನಡೆಯುವ ಕಾಲದಲ್ಲಿ ಕಾನೂನಾಗಿ ಮಾಡುತ್ತೀರಿ ಎಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. PALANIYAPPAN (Ulsoor).—Mr. Speaker, even though I did not

want to speak on the Bill, after my Hon'ble friend Sri Ramaiya has spoken, it has become necessary for me to speak on this Bill. Sir, in my opinion, I feel the biggest landholders in the State are these mutts and if we want to have a socialistic pattern of Government, I think, it is high time that we should bring in such a legislation as this. Sir, in a country where today we think of a socialistic pattern of Government, where we think that tiller of the soil should be the owner of the land and where every man should have the right to live and the right to exist, if we want to formulate this principle, I feel, Sir, that these lands and other properties should be divided among the people in equal proportions. For this reason, the long-pending Bill, namely, the abolition of religious and charitable inams should be implemented. By passing this Bill, the Hon'ble Minister for Revenue would add another feather in his cap. Sri Ramaiya said that more than thousand and odd Gods that exist in South India, and specially in Mysore, will shower curses on all of us. Though I am a believer in God, I say that if there is any God which would bring ill-luck to one and all in this country, I am not prepared to worship such a God. The God is there just to guide us and give us protection and take us to safety. Such a God we should worship and not a God who tries to wreak vengeance on us. We feel that the entire Universe is the creation of God and every one of us is His creation; if God thinks that we are taking his property or we are making a legislation to snatch away the property belonging to God, I think let us not have such a God who is a capitalistic God in a socialistic country. If the Gods cannot keep pace with us with the march of time, I think it is high time that we should give up such Gods, and Goddesses.

Further, Sir, I would just like to bring to the notice of this House regarding the appointment of Deputy Commissioners for the purpose of fixing a fair rent. I think the Deputy Commissioners are already overburdened; even for non-official business also such as Chairman of Mysore Sugar Company, Deputy Commissioners are appointed. So, they are already overburdened with work and again and again if we thrust this new work upon them, that will be one of the reasons why the Government work is not carried on properly. So, with these few words, I would just request the Hon'ble Minister to see that he does not withdraw the Bill but pass it in this Session.

4 P. M.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಅಧ್ಯಕ್ಷರೇ, ಮೈಸೂರು ಸಂಸ್ಥಾನದಲ್ಲಿ ಮಠ ಸಂಬಂಧವಾದ ಮತ್ತು ಧರ್ಮ ಸಂಬಂಧವಾದ ಇನಾಂ ರದ್ದಿಯಾತಿ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹೋಗಿ ಪರಿಷ್ಕರಿಸಲ್ಪಟ್ಟು ಬಂದದ್ದಕ್ಕಾಗಿ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಮಸೂದೆ ಬಹಳ ಹಿಂದೆಯೇ ಜಾರಿಗೆ ಬರಬೇಕಾಗಿತ್ತು. ಆದರೆ, ಕಾರಣಾಂತರದಿಂದ ಬಾರದೆ ಇದ್ದರೂ, ಈಗ ಬಂದದ್ದಕ್ಕಾಗಿ ನಾವೆಲ್ಲರೂ ಸಂತೋಷಪಡಬೇಕಾಗಿದೆ.

ಈ ಮಸೂದೆ ನಮ್ಮ ದೇಶದಲ್ಲಿ ಬಹಳ ಪ್ರಾಮುಖ್ಯವಾದದ್ದು. ನಾವು ಈಗಾಗಲೇ ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ಬಿಲ್ಲನ್ನು ಈ ಸಭೆಯಲ್ಲಿ ಪಾಸು ಮಾಡಿ ಭಾರತದ ಪ್ರೆಸಿಡೆಂಟರ ಒಪ್ಪಿಗೆಗೆ ಕಳುಹಿಸಿಕೊಟ್ಟಿರುವುದು ತಮ್ಮೆಲ್ಲರಿಗೂ ಗೊತ್ತೇ ಇದೆ. ಅದು ಆಗಿ ಆಗಲೇ ಒಂದು ವರ್ಷವಾದರೂ ಅಲ್ಲಿಂದ ಮಂಜೂರಾಗಿ ಬಾರದಿರುವುದಕ್ಕೆ ಕಾರಣವೇನೋ ಗೊತ್ತಾಗಿಲ್ಲ. ಈಗಲಾದರೂ ಪುನಃ ನಮ್ಮ ಈ ಸಭೆಯಿಂದ ಈ ನಿಧಾನಕ್ಕೆ ಕಾರಣವನ್ನು ಕೇಳಿ ಜಾಗ್ರತೆ ಬರುವಂತೆ ಕೇಳಿಕೊಂಡು ಒಂದು ನಿರ್ಣಯ ಮಾಡಿ ಕಳುಹಿಸಿದರೆ ಒಳ್ಳೆಯದೆಂದು ಭಾವಿಸುತ್ತೇನೆ.

ನಾವೀಗ ಮಠ ಸಂಬಂಧವಾದ ಮತ್ತು ಧಾರ್ಮಿಕ ಸಂಬಂಧವಾದ ಇನಾಂಗಳ ರದ್ದಿಯಾತಿ ಮಸೂದೆಯನ್ನು ಪರಿಶೀಲಿಸಬೇಕಾಗಿದೆ. ನಮ್ಮ ದೇಶದಲ್ಲಿ ಇಂಥ ಇನಾಂ ಜಮೀನುಗಳು ಬೇಕಾದಷ್ಟಿವೆ. ಲಕ್ಷಾಂತರ ಎಕರೆಗಳಿವೆ. ಅಂಥ ಜಮೀನುಗಳಿಂದ ನಮ್ಮ ದೇಶಕ್ಕೆ ಯಾವ ಪ್ರಗತಿಯಾಗಲಿ, ಒಳ್ಳೆಯದಾಗಲಿ ಆಗಿರುವುದಿಲ್ಲ. ಆದ್ದರಿಂದ ಇವುಗಳಿಗೆ ಇನಾಂತಿಗೆ ಬದಲಾಗಿ ವರ್ಷಂಪ್ರತಿ ಒಂದು ಮೌಲ್ಯವನ್ನು ನಿಗದಿಯಾಗಿ ಕೊಡುವುದನ್ನು ಯೋಚನೆ ಮಾಡಿ, ಈ ಧರ್ಮ ಸಂಸ್ಥೆಗಳಿಗೆ, ಮತ್ತು ದೇವಸ್ಥಾನಗಳಿಗೆ ಕೊಡುವುದು ಸ್ವಲ್ಪ ಹೆಚ್ಚಾದರೂ ಪರವಾಗಿಲ್ಲವೆಂದು ಒಂದು ಮೊಬಲಗನ್ನು ಗೊತ್ತುಮಾಡಿ ಒಂದು ಫಂಡುಮಾಡಿ ಆ ಬಡ್ಡಿಯ ಹಣದಿಂದ ವರ್ಷ ವರ್ಷವೂ ದೇವಸ್ಥಾನಗಳ ಮತ್ತು ಧರ್ಮ ಸಂಸ್ಥೆಗಳ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವುದಕ್ಕೆ ಅನುಕೂಲ ಮಾಡುವುದು ಒಳ್ಳೆಯದು. ಹೀಗೆ ಮಾಡದೆ ಪ್ರತಿವರ್ಷವೂ ಸರ್ಕಾರದ ಬೊಕ್ಕಸದಿಂದಲೇ ಕೊಡಬೇಕಾದರೆ ಅದು ಖಂಡಿತವಾಗಿಯೂ ಸರ್ಕಾರಕ್ಕೆ ಹೊರೆಯಾಗಿ ಪರಿಣಮಿಸುತ್ತದೆ.

ನಮ್ಮ ದೇಶದಲ್ಲಿ ಅನೇಕ ಜನ ಜಮೀನಿಲ್ಲದೆ ಬಡತನದಲ್ಲಿದ್ದಾರೆ. ದೇವರಿಗೆ ಬೇಕಾದುದು ಎಲ್ಲಾ ಜನರಿಗೂ ಸರ್ವಸಮಾನರಾದ ಹಕ್ಕುಗಳನ್ನು ಪಡೆದು ಸುಖದಿಂದಿರಬೇಕು, ಎಲ್ಲರಿಗೂ ಹೊಟ್ಟೆಗೆ ಬಟ್ಟೆಗೆ ಅನುಕೂಲದಿಂದಿರಬೇಕೆಂಬುದೇ ಹೊರತು, ದೇವರಿಗೆಂದು

(ಶ್ರೀ ಡಿ. ಎಂ. ಗೋವಿಂದರಾಜು.)

ಜಮೀನು ಕೊಡುವುದರಿಂದಾಗಲಿ ಅಥವಾ ಇನ್ನಾವ ರೀತಿಯ ಆಷಾಢಭೂತಿ ಭಕ್ತಿಯನ್ನು ತೋರಿಸುವುದರಿಂದಾಗಲಿ ತೃಪ್ತಿಯಾಗುವುದಿಲ್ಲ. ಮುಖ್ಯವಾಗಿ ಜನರ ಹೃದಯದಲ್ಲಿ ಭಕ್ತಿಯಿರಬೇಕು, ಆಗಲೇ ದೇವರು ಸುಪ್ರೀತನಾಗಿ ದೇಶಕ್ಕೆ ಕಲ್ಯಾಣವನ್ನು ನೀಡುತ್ತಾನೆ. ಆದ್ದರಿಂದ ಎಲ್ಲ ಜನರ ಹಿತರಕ್ಷಣೆಗೈದು ನಮ್ಮ ದೇಶದ ಪ್ರಗತಿ ಸಾಧನೆಗೆ ಪ್ರಯತ್ನಿಸುವುದೇ ದೇವರಿಗೆ ಪ್ರೀತಿದಾಯಕವಾದ್ದು. ಹಾಗಿಲ್ಲದೇ ಈ ರೀತಿ ಜಮೀನುಗಳನ್ನು ದೇವಸ್ಥಾನಗಳಿಗೂ, ಧರ್ಮ ಸಂಸ್ಥೆಗಳಿಗೂ ಬಿಡುವುದರಿಂದ ದೇವರು ತೃಪ್ತಿಗೊಳ್ಳುವುದಿಲ್ಲ. ಮಾನ್ಯ ಸ್ನೇಹಿತರಾದ ಶ್ರೀ ರಾಮಯ್ಯನವರು ದೇವರ ವಿಚಾರವನ್ನು ಬಹಳವಾಗಿ ಹೇಳಿದರು. ಅವರು ಹೇಳಿದ್ದರಲ್ಲಿ ಖಂಡಿತವಾಗಿಯೂ ಸದಸ್ಯರು ಭಯಪಡುವುದಕ್ಕೆ ಎಷ್ಟು ಬೇಕೋ ಅಷ್ಟು ಹೇಳಿದರು, ಅದಕ್ಕೆ ಕಾರಣವಿಲ್ಲ. ದೇವರಿಗೆ ಬೇಕಾಗಿರುವುದು ದೇಶದ ಹಿತದೃಷ್ಟಿ, ಜನರ ಹಿತದೃಷ್ಟಿ. ಇನ್ನಾವ ಆಷಾಢಭೂತಿ ಭಕ್ತಿಯೂ ಬೇಡ. ಆದ್ದರಿಂದ ಈ ಮಸೂದೆಯನ್ನು ಈ ಸಭೆಯಲ್ಲಿ ಆದಷ್ಟು ಜಾಗ್ರತೆ ಪಾಸು ಮಾಡಿ ಬಡಜನರಿಗೆ ಅನುಕೂಲ ಮಾಡುವುದಾದರೆ ದೇವರು ಸುಪ್ರೀತನಾಗುತ್ತಾನೆ. ಈ ಮಸೂದೆಗೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆಯನ್ನು ಕೊಟ್ಟಿರುವುದು ಅದರಲ್ಲೂ ಒಮ್ಮತವಾಗಿ ಒಪ್ಪಿರುವುದು ಶ್ಲಾಘನೀಯ.

ಇದರಲ್ಲಿ ಕೆಲವು ಬದಲಾವಣೆಗಳನ್ನು ಸದಸ್ಯರು ಹೇಳಿದ್ದಾರೆ, ಅದನ್ನು ಎಷ್ಟರಮಟ್ಟಿಗೆ ಅಂಗೀಕರಿಸಬಹುದೆಂಬುದನ್ನು ಆಲೋಚನೆ ಮಾಡಿ ಆದಷ್ಟು ಬೇಗ ಈ ಅಧಿವೇಶನದಲ್ಲೇ ಮಂಜೂರಾಗುವಂತೆ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ದೇವರು ಎಲ್ಲರಿಗೂ ಒಳ್ಳೆಯದು ಮಾಡುತ್ತಾನೆಂದು ಹೇಳಿ ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಮಾನ್ಯಸದಸ್ಯರನೇಕರು ಈ ಮಸೂದೆಯಲ್ಲಿ ಅಡಗಿರತಕ್ಕ ನಿಬಂಧನೆಗಳ ವಿಚಾರವಾಗಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ; ಕೆಲವರು ಕೆಲವು ಆಕ್ಷೇಪಣೆಗಳನ್ನೂ ಎತ್ತಿದ್ದಾರೆ; ಕೆಲವರು ವಾದ ವಿವಾದಗಳಿಗೆ ಅನುಕೂಲವಾಗುವಂಥ ರೀತಿಯಲ್ಲಿ ಪರಮಾತ್ಮನ ಹೆಸರನ್ನು ಧಾರಾಳವಾಗಿ ಉಪಯೋಗಿಸಿಕೊಂಡಿದ್ದಾರೆ. ಶ್ರೀ ಮಾರ್ ಪಿ. ಆರ್. ರಾಮಯ್ಯನವರು ಮಾತನಾಡುವಾಗ, ದೇವರಿಗೆ ಸಿಟ್ಟುಬಂದರೆ ಅನಾಹುತವಾಗಬಹುದು ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ; ಶ್ರೀ ಮುಲ್ಕ ಗೋವಿಂದರೆಡ್ಡಿಯವರು, ಈ ವಿಜ್ಞಾನ ಯುಗದಲ್ಲಿ ಆಧ್ಯಾತ್ಮಿಕ ವಿಚಾರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬಾರದು . . . .

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಾನು ಹಾಗೆ ಹೇಳಲಿಲ್ಲ !

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ಆದರೆ, ವಿಚಾರಪರವಾಗಿರಬೇಕೆಂದು ತಾವು ಅಪ್ಪಣೆ ಕೊಟ್ಟಿದ್ದೀರಿ. ಶ್ರೀಮಾರ್ ರಾಮಯ್ಯನವರು ಮಾತನಾಡುವಾಗ, ನನ್ನ ದೇವರ ನಂಬುಗೆಯ ವಿಷಯವನ್ನೂ ಕೂಡ ಪ್ರಸ್ತಾಪಿಸಿದರು. ಅವರಿಗೆ ಇಷ್ಟು ಹೇಳಬಲ್ಲೆ. ನಾನು ನಂಬಿರುವ ದೇವರು ದಯಾಮಯ, ಸರ್ವಶಕ್ತ, ಮತ್ತು ಸರ್ವಾಂತರ್ಯಾಮಿ. ಆ ಸರ್ವಶಕ್ತನಾದ ಪರಮಾತ್ಮನ ಅಂಶ ನಮ್ಮೆಲ್ಲರಲ್ಲೂ ಇದೆಯೆಂದು ನಾನು ತಿಳಿದಿದ್ದೇನೆ. ನನ್ನಲ್ಲಿರತಕ್ಕ ಭಗವಂತನು ಈ ಮಸೂದೆಯನ್ನು ತಮ್ಮ ಮುಂದಿಡಲು ಪ್ರೇರೇಪಿಸಿದ್ದಾನೆ. ತಮ್ಮಲ್ಲಿರತಕ್ಕ ಭಗವಂತನು ಈ ಮಸೂದೆಗೆ ಬೆಂಬಲ ಕೊಡುವಂತೆ ತಮ್ಮನ್ನು ಪ್ರೇರೇಪಿಸುತ್ತಿದ್ದಾನೆ. ಆದ್ದರಿಂದ ಭಗವಂತನಿಗೆ ಈ ಮಸೂದೆಯಿಂದ ಯಾವ ರೀತಿಯ ಅತೃಪ್ತಿಯೂ ಆಗಿಲ್ಲವೆಂದು ನನ್ನ ದೃಢ ನಂಬಿಕೆ. Never conceive of a god who can wreak vengeance on mankind ! ಆದ್ದರಿಂದ ಭಗವಂತನ ಉಗ್ರ ಶಾಪಕ್ಕೆ ಅಥವಾ ಕೋಪಕ್ಕೆ ಗುರಿಯಾಗುತ್ತೇವೆಂದು ಶ್ರೀ ಪಿ. ಆರ್. ರಾಮಯ್ಯನವರು ಹೇಳಿದರೆ ಅದು ಸರಿಯಲ್ಲವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ನಿನ್ನೆ ದಿವಸ ಮಾತನಾಡಿದ ನನ್ನ ಹಳೆಯ ಮಿತ್ರರಾದ ಶ್ರೀಮಾರ್ ಭೀಮಪ್ಪನಾಯಕರು, ಕಳೆದ ಅಧಿವೇಶನದಲ್ಲೂ ಇದರ ಚರ್ಚೆಯಲ್ಲಿ ಭಾಗವಹಿಸಿದ್ದರು ಆಗಿನ ಅವರ ವಾದ ಸರಣಿಯೇ ಒಂದು ತರಹ ಇತ್ತು. ನಿನ್ನೆ ಮಾಡಿದ ಭಾಷಣದ ವಾದ ಸರಣಿಯೇ ಇನ್ನೊಂದು ತರಹ ಇತ್ತು. ಆದರೆ ನನ್ನ ಅಭಿಪ್ರಾಯ ತಪ್ಪಾಗಿರಬಹುದು. ಮಾನ್ಯ ಸದಸ್ಯರೇ ಓದಿ ಅವರವರ ಅಭಿಪ್ರಾಯಕ್ಕೆ ಬರುವುದಕ್ಕೆ ಅವಕಾಶವಿದೆ. ಅವರ ಭಾಷಣದಲ್ಲಿ ಅವರು ಅವೊತ್ತು ಏನು ಹೇಳಿದ್ದರು, ಇವತ್ತು ಏನು ಹೇಳಿದ್ದಾರೆ ಎಂಬುದನ್ನು ಹೋಲಿಸಿ ನೋಡಿದರೆ ತಮಗೇ ಗೊತ್ತಾಗುತ್ತದೆ.

ಆಮೇಲೆ, ನನ್ನ ಪ್ರಿಯಮಿತ್ರರಾದ ಶ್ರೀಮಾರ್ ಚನ್ನಬಸಪ್ಪನವರು ವಾದಮಾಡುತ್ತಾ ಭೂಸುಧಾರಣೆಯಲ್ಲಿ ತಾವು ಯಾರಿಗೂ ಕಡಮೆಯಿಲ್ಲವೆಂಬ ಭಾವನೆಬರುವ ಹಾಗೆ ಮಾತನಾಡಿದರು. ಆದರೆ ಅವರ ಮನಸ್ಸಿನ ಅಭಿಪ್ರಾಯ ನನಗೂ ಗೊತ್ತಿದೆ, ತಮಗೂ ಗೊತ್ತಿದೆ. ಅವರು ಮಾತಾಡುತ್ತಾ, ಮಾತಾಡುತ್ತಾ, ಭೂಸುಧಾರಣಾ ಸಮಿತಿಯ ವರದಿಯನ್ನು ಪ್ರಸ್ತಾಪಿಸಿ ಮಾತನಾಡುವಾಗ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಸಮಿತಿಯ ವರದಿಗೆ ವಿರುದ್ಧವಾಗಿಯೇ ಈ ಮಸೂದೆಯನ್ನು ಮಂಡಿಸಿದ್ದಾರೆ ಎಂದು ಹೇಳುವ ಪ್ರಯತ್ನವನ್ನು ಕೂಡ ಮಾಡಿಬಿಟ್ಟರು.! ಶ್ರೀಮಾರ್ ಚನ್ನಬಸಪ್ಪನವರು ಭೂಸುಧಾರಣಾ ಸಮಿತಿಯಲ್ಲಿ ಒಬ್ಬ ಗಣ್ಯ ಸದಸ್ಯರು. ಅವರ ಶಿಫಾರಸು ಈ ರೀತಿಯಾಗಿದೆ :

"We are also in full agreement with the principle that even after the abolition of Inams, religious, charitable and educational institutions should be assured of adequate income to carry on their normal activities. We consider that the average of the expenditure on normal items incurred by the institution concerned during the preceding ten years would give a more correct indication of the normal expenditure than the average of the income. We therefore recommend that on the abolition of the Inam tenure of Inam villages held by religious, charitable or educational institutions the compensation payable in a lump-sum immediately or in instalments spread over five years, need not be determined but that Government should guarantee a net annual

> income adequate to meet the normal expenditure, based on the average expenditure of the ten years preceding the abolition of the Inam tenure."

This is the gist of the recommendations of that Committee, Sir. ಮಾನ್ಯ ಸದಸ್ಯರು ಮಾಡಿದ ಭಾಷಣವನ್ನು ತಾವೂ ಕೇಳಿದ್ದೀರಿ, ನಾನೂ ಕೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ತಸ್ದೀಕ್ ಕೊಡಬೇಕೆಂಬ ವಿಷಯದಲ್ಲಿ ನಾನು ಹೇಳಿದೆನೇ ಹೊರತು, ಕಾಂಪೆನ್ಸೇಷನ್ ಕೊಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಹೀಗಿರುವಾಗ ತಾವು ತಪ್ಪು ಅಭಿಪ್ರಾಯ ಬರುವಂತೆ ನನ್ನ ಭಾಷಣವನ್ನು ಎತ್ತಿತೋರಿಸುವುದು ಸರಿಯಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಬಳ್ಳಾರಿ ಸಿದ್ದಮ್ಮನವರ ಭಾಷಣ ತಮಗೆ ಮುಖ್ಯವಾಗಿ ಅನ್ವಯಿಸುತ್ತದೆ ಎಂದು ನಾನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಈ ಸಂದರ್ಭದಲ್ಲಿ ಈ ಮಸೂದೆಯ ಇತಿಹಾಸವನ್ನು ಬಹಳ ಸಂಕ್ಷೇಪವಾಗಿ ವಿವರಿಸುವುದು ಅವಶ್ಯಕ. 1951ನೆಯ ಇಸವಿಯಲ್ಲಿ ಸರ್ಕಾರದವರು ಒಂದು ಮಸೂದೆಯನ್ನು ಮಾಡಿದರು. ಆ ಮಸೂದೆಯು ವ್ಯಕ್ತಿಗಳಿಗೆ ಸಂಬಂಧಪಟ್ಟ ಇನಾಂಗಳಿಗೂ ಮತ್ತು ಶೃಂಗೇರಿ ಜಹಗೀರಿಗೂ ಅನ್ವಯಿಸಿತ್ತು. ಆ ಮಸೂದೆಯನ್ನು ಕೊನೆಗೆ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲಾಯಿತು, ಸೆಲೆಕ್ಟ್ ಕಮಿಟಿಯವರು ತಮ್ಮ ವರದಿಯನ್ನೂ ಕೂಡ ಶಾಸನ ಸಭೆಗೆ ಒಪ್ಪಿಸಿದ್ದರು. ಅಷ್ಟುಹೊತ್ತಿಗೆ ಸಾರ್ವತ್ರಿಕ ಚುನಾವಣೆಗಳು ಬಂದ ದೆಶೆಯಿಂದ ಆ ಶಾಸನಸಭೆ ಮುಕ್ತಾಯಗೊಂಡು ಆ ಮಸೂದೆ ಅಲ್ಲಿಗೇ ನಿಂತುಹೋಯಿತು, ಅನಂತರ, ಪುನಃ ಈ ಮಸೂದೆಯನ್ನು ಮಂಡಿಸುವ ಪ್ರಯತ್ನವನ್ನು ನಾವು ಮಾಡಿದೆವು. ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂಗಳನ್ನು ವ್ಯಕ್ತಿಗಳಿಗೆ ಸಂಬಂಧಪಟ್ಟ ಇನಾಂಗಳೊಡನೆ ಸೇರಿಸಿ ಒಟ್ಟು ಮಸೂದೆಯನ್ನು ತಂದರೆ ಚರ್ಚೆ, ವಾದವಿವಾದಗಳ ದೆಶೆಯಿಂದ ಶಾಸನವಾಗುವುದು ತಡವಾಗಬಹುದೆಂಬ ಭಾವನೆಯಿಂದ ವ್ಯಕ್ತಿಗಳಿಗೆ ಸಂಬಂಧಪಟ್ಟ ಇನಾಂಗಳನ್ನು ರದ್ದುಮಾಡುವುದಕ್ಕೆ ಮಾತ್ರ ಪ್ರತ್ಯೇಕ ಒಂದು ಮಸೂದೆಯನ್ನು ತಯಾರು ಮಾಡಿದೆವು. ಆಗ ಧಾರ್ಮಿಕಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂಗಳನ್ನು ರದ್ದುಮಾಡತಕ್ಕ ವಿಷಯವನ್ನು ಆ ಮಸೂದೆಯಲ್ಲಿ ಅಡಕ ಮಾಡದಿರುವುದು ತಪ್ಪೆಂದು ಅನೇಕ ಮಾನ್ಯ ಸದಸ್ಯರು ಚರ್ಚೆಮಾಡಿದರೆಂಬುದು ಎಲ್ಲರಿಗೂ ಜ್ಞಾಪಕವಿದೆ. ಅದಕ್ಕಾಗಿ ಈ ಮಸೂದೆಯನ್ನು ಬೇಗ ತರಲಾಯಿತು. ಈ ಮಸೂದೆಯೂ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ವಿಫುಲವಾಗಿ ಚರ್ಚಿಸಲ್ಪಟ್ಟಿದೆ. ಎಲ್ಲಾ ವಿಷಯಗಳನ್ನೂ ಕೂಡ ಸೆಲೆಕ್ಟ್ ಸಮಿತಿಯವರು ಪರಿಶೀಲನೆಮಾಡಿದರು, ಶೃಂಗೇರಿಯ ಜಹಗೀರಿಯ ವಿಚಾರವನ್ನೂ ಕೂಡ ಬಹಳ ಚೆನ್ನಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದಾರೆ. ನಾನು ನಿನ್ನೆದಿವಸ ಅರಿಕೆ ಮಾಡಿಕೊಂಡ ಹಾಗೆ ಶೃಂಗೇರಿಯ ಜಹಗೀರಿಗೆ ವಿನಾಯಿತಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಒಮ್ಮತವಾಗಿ ತೀರ್ಮಾನವಾಗಿದೆ. ಅಂಥದರಲ್ಲಿ ಪುನಃ ಶೃಂಗೇರಿ ಜಹಗೀರಿಗೆ ವಿನಾಯಿತಿ ಕೊಡಬೇಕೆಂದು ಶ್ರೀಮಾನ್ ರಾಮಯ್ಯನವರು ವಾದಿಸಿದರು. ಅದರಿಂದ ಎಷ್ಟು ಪ್ರಯೋಜನವೋ ನಾನು ಹೇಳಲಾರೆ. ಐದು ವರ್ಷಗಳಿಂದ ನಾವೂ ಸುಧಾರಣೆಗಳನ್ನು ಮಾಡುತ್ತಿದ್ದೇವೆ. ಪ್ರಜಾ ಸೋಷಿಯಲಿಸ್ಟರಾಗಲಿ, ಸ್ವತಂತ್ರರೇ ಆಗಲಿ ಅಥವಾ ಸರ್ಕಾರವನ್ನು ನಡೆಸತಕ್ಕ ಕಾಂಗ್ರೆಸ್ ಪಕ್ಷವೇ ಆಗಲಿ, ನಾವೆಲ್ಲರೂ ಕೂಡ ಜನತೆಗೆ ಕೊಟ್ಟಿರತಕ್ಕ ಆಶ್ವಾಸನವನ್ನು ಕೊಟ್ಟಿದ್ದೇವೆ. ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂಬ ಆಶ್ವಾಸನವನ್ನು ಕೊಟ್ಟಿರತಕ್ಕದ್ದನ್ನು ಯಾರೂ ಮರೆಯಬಾರದು ಎಂದು ಹೇಳಿ ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಚರ್ಚೆ ಇದುವರೆಗೂ ನಡೆದಿದ್ದನ್ನು ನೋಡಿದ್ದರಲ್ಲಿ—ಈ ಮಸೂದೆಯಲ್ಲಿರತಕ್ಕ ಕೆಲವು ನಿಬಂಧನೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಸರ್ಕಾರದ ಹೆಚ್ಚು ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆಂಬುದಾಗಿ ಕಂಡುಬರುತ್ತಿದೆ. ಕೆಲವು ಮಾನ್ಯ ಸದಸ್ಯರುಗಳು ಮುಖ್ಯವಾಗಿ ಈ ತಸ್ದಿಕ್ ಅಲೋಯನ್ಸನ್ನು ಕೊಡತಕ್ಕ ಸಂದರ್ಭದಲ್ಲಿ ಸರ್ಕಾರದ ಜವಾಬ್ದಾರಿ ಬಹಳ ಹೆಚ್ಚಾಗಿರುತ್ತದೆ, ಹೀಗೆ ಸರ್ಕಾರದವರು ಪ್ರತಿವರ್ಷವೂ ಇಂಥ ಒಂದು ದೊಡ್ಡ ಜವಾಬ್ದಾರಿಯನ್ನು ಹೊರುವುದಕ್ಕೆ ಹೋಗುವುದು ಸೂಕ್ತವಲ್ಲ ಎಂದು ವಾದಮಾಡಿದ್ದಾರೆ. ಆದುದರಿಂದ ಈ ವಿಷಯವಾಗಿ ನಾನು ನಾಲ್ಕು ಮಾತುಗಳನ್ನಾಡುವುದು ಸೂಕ್ತ.

ಈಗ ತಮ್ಮ ಮುಂದೆ ಇರತಕ್ಕ ಸೆಲೆಕ್ಟ್ ಸಮಿತಿಯ ವರದಿಯ ಪ್ರಕಾರ ಇಲ್ಲಿಯತನಕ ಆ ಖದೀಂ ರೈತರು ಸಾಲೇ ಸಾಲ್ ಇನಾಂದಾರರುಗಳಿಗೆ ಏನೊಂದು ವರಮಾನವನ್ನು ಕೊಟ್ಟುಕೊಂಡು ಬರುತ್ತಿದ್ದರೋ ಅಂಥ ಆ ಒಂದು ವರಮಾನ ಇನ್ನು ಮುಂದೆ ಸರ್ಕಾರಕ್ಕೆ ಬರುತ್ತದೆ. ಈ ಕಾರಣದಿಂದ ನಮಗೆ ಆ ತಸ್ದೀಕ್ ಮೊಬಲಗನ್ನು ಕೊಡುವುದರಿಂದ ಏನೂ ನಷ್ಟವಾಗುವುದಿಲ್ಲ. ಈಗ ನಾವು ಕೆಲವು ರೈತರುಗಳಿಗೆ ಪರ್ಮನೆಂಟ್ ಟೆನೆಂಟ್ಸ್ ಎಂಬುದಾಗಿ ಏನೊಂದು ಹೊಸ ಪದವನ್ನು ಪ್ರಯೋಗ ಮಾಡಿದ್ದೇವೆಯೋ ಅಂಥವರು ಇರುವುದು ಬಹಳ ಕಡಮೆ ಸಂಖ್ಯೆ. ನ್ಯಾಯವಾದಿಗಳಾಗಿದ್ದವರಿಗೆ ಈ ಪರ್ಮನೆಂಟ್ ಟೆನೆಂಟ್ಸ್ ಅನ್ನತಕ್ಕಂಥವರು ಯಾವ ರೀತಿ ಇರಬೇಕು ಅನ್ನುವಂಥ ವಿಚಾರವನ್ನು ನಾನೀಗ ಮತ್ತೆ ಹೊಸದಾಗಿ ಹೇಳಬೇಕಾಗಿಲ್ಲ. ಲ್ಯಾಂಡ್ ರವಿನ್ಯೂ ಕೋಡಿನ 79ನೆಯ ಸೆಕ್ಷನ್ ಪ್ರಕಾರ, ಒಬ್ಬ ರೈತನು ಪರ್ಮನೆಂಟ್ ಟೆನೆಂಟ್ ಹೌದೋ, ಅಲ್ಲವೋ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ನಾವು ಅನೇಕ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಅದರ ಪ್ರಕಾರ ಇಂಥವನೇ ಪರ್ಮನೆಂಟ್ ಟೆನೆಂಟ್ ಎಂದು ರುಜುವಾತು ಮಾಡುವುದು ಬಹಳ ಕಷ್ಟ. ಆದರೆ ಮುಜರಾಯಿಗೆ ಸಂಬಂಧಪಟ್ಟಂಥ ಇನಾಂ ಜಮೀನುಗಳನ್ನು ಪರಭಾರೆ ಮಾಡುವುದಕ್ಕೆ ಯಾರಿಗೂ ಹಕ್ಕಿರುವುದಿಲ್ಲ. ಆದರೆ ಅಂಥ ಭೂಮಿಗಳನ್ನು ಐದು ವರ್ಷಗಳ ಕಾಲದವರೆಗೆ ಗೇಣಿಗೆ ಕೊಡತಕ್ಕಂಥ ಒಂದು ಹಕ್ಕು ಮಾತ್ರ ಆ ಸಂಸ್ಥೆಯ ವಹಿವಾಟುದಾರರಿಗೆ ಇರುತ್ತದೆ. ಹಾಗೊಂದುವೇಳೆ ಅವರಿಗೆ ಆ ಜಮೀನನ್ನು ಪರಭಾರೆ ಮಾಡಬೇಕೆಂಬ ಸಂದರ್ಭ ಬಂದರೆ ಆಗ ಅವರು ಸರ್ಕಾರದವರ ಅನುಮತಿ ಪಡೆಯಬೇಕಾಗಿರುತ್ತದೆ. ಅಲ್ಲದೆ ಈ ಪರ್ಮನೆಂಟ್ ಟೆನೆಂಟ್ಸ್‌ಗಳು ಇರುವುದೂ ಕೂಡ ಬಹಳ ಕಮ್ಮಿ ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಈ ಪರ್ಮನೆಂಟ್ ಟೆನೆಂಟ್ಸ್‌ಗಳು ಅಲ್ಪಸ್ವಲ್ಪವಾಗಿದ್ದಗೂ ಅನೇಕ ಸಂದರ್ಭಗಳಲ್ಲಿ ಇವರು ಕೇವಲ ಕಂದಾಯವನ್ನು ಮಾತ್ರ ಕೊಡುತ್ತಿದ್ದಾರೆ. ಅವರಿಗೆ ಈಗಾಗಲೇ ಜಮೀನಿನ ಮೇಲೆ ಒಂದು ಶಾಶ್ವತವಾದ ಹಕ್ಕಿದೆ. ಈಗ ನಾವು ಅವರಿಗೆ ಒದಗಿಸಿಕೊಡುವುದು ಎಂದರೆ ಮಾಲೀಕತ್ವದ ಒಂದು

(ಶ್ರೀ ಕಡಿದಾಳ್ ಮಂಜಪ್ಪ.)

ಹಕ್ಕು ಮಾತ್ರ. ಅದಕ್ಕಾಗಿ ಅವರು ಕಂದಾಯದ 20 ರಷ್ಟು ಮೊಬಲಗನ್ನು ಸರ್ಕಾರಕ್ಕೆ ಕೊಡಬೇಕೆಂದು ಈ ಮಸೂದೆಯಲ್ಲಿ ಅಡಕಮಾಡಿದ್ದೇವೆ. ಆದರೆ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುವಾಗ ಈ ಪರ್ಮನೆಂಟ್ ಟೆನೆಂಟ್ಸ್‌ಗಳೆಂದು ಯಾವ ಒಂದು ರೈತಾಪಿ ವರ್ಗವಿದೆಯೋ ಅವರಿಂದ ಕೇವಲ ಕಂದಾಯ 20 ರಷ್ಟು ಮೊಬಲಗನ್ನು ತೆಗೆದುಕೊಂಡು ಅವರಿಗೆ ಜಮೀನನ್ನು ಕೊಟ್ಟರೆ ಸರ್ಕಾರದಮೇಲೆ ಬಹಳ ಹೊರೆ ಬೀಳುತ್ತದೆಂದೂ ಅವರು ಹೇಳಿದರು. ಆದರೆ ಅದಕ್ಕಾಗಿ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. "ಅಕ್ಕಿಯಮೇಲೆ ಆಸೆ, ನೆಂಟರ ಮೇಲೆ ಪ್ರೀತಿ" ಇವೆರಡನ್ನೂ ಹೊಂದಾವಣಿಕೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. You cannot save the money and at the same time save the religious institutions. ಈ ಧಾರ್ಮಿಕ ಸಂಸ್ಥೆಗಳು ಸಾರೋದ್ಧಾರವಾಗಿ ನಡೆದುಕೊಂಡು ಬರಬೇಕು ಎಂಬುದಾಗಿ ತಮ್ಮ ಇಚ್ಛೆ ಇದ್ದರೆ . . . .

ಶ್ರೀ ಎ. ಭೀಮಪ್ಪನಾಯಕ್.—ಈ ಧಾರ್ಮಿಕ ಸಂಸ್ಥೆ ಮಾತ್ರವೇಯೋ ?

ಶ್ರೀ ಕಡಿದಾಳ್ ಮಂಜಪ್ಪ.—ಈ ತಸ್ತೀಕ್ ಅಲೋಯನ್ಸನ್ನು ಸಾಲೇ ಸಾಲ್ ಕೊಡತಕ್ಕದ್ದಕ್ಕೆ ಬದಲಾಗಿ ನಾವು ಈಗಾಗಲೇ ಆ ವ್ಯಕ್ತಿ ಸಂಬಂಧವಾದ ಮಸೂದೆಯಲ್ಲಿ ಇನಾಂದಾರರುಗಳ ಬಗ್ಗೆ ಏನೊಂದು ತತ್ವವನ್ನು ಅನುಮೋದಿಸಿದ್ದೇವೋ ಆ ಒಂದು ತತ್ವವನ್ನೇ ಈ ಸಂದರ್ಭದಲ್ಲಿಯೂ ಅನುಮೋದಿಸಿ ಈ ಮೊಬಲಗನ್ನು ಈಗಲೇ ನಿರ್ಣಯಮಾಡಿ ಅದನ್ನು ಆ ಧಾರ್ಮಿಕ ಸಂಸ್ಥೆಗಳ ಹೆಸರಿನಲ್ಲಿ ಡೆಪಾಜಿಟ್ ಮಾಡುವುದು ಸೂಕ್ತ ಎಂದು ಕೆಲವು ಮಾನ್ಯ ಸದಸ್ಯರುಗಳು ವಾದಮಾಡಿದ್ದಾರೆ—ಆದರೆ ಈ ವಿಚಾರವನ್ನು ಸರ್ಕಾರದವರೂ ಸಹ ಪರಿಶೀಲನೆ ಮಾಡಿದ್ದಾರೆ; ಅನಂತರ ಜಾಯಿಂಟ್ ಸೆಲೆಕ್ಟ್ ಸಮಿತಿಯವರೂ ಕೂಡ ಪರಿಶೀಲನೆ ಮಾಡಿದ್ದಾರೆ. ಆದರೆ ಆ ರೀತಿಯಾಗಿ ಈ ಧಾರ್ಮಿಕ ಸಂಸ್ಥೆಗಳಿಗೆ ಏಕ್‌ಗಂಟಿನಲ್ಲಿ ಪರಿಹಾರದ ಮೊಬಲಗನ್ನು ಕೊಡುವುದರಿಂದ ಈ ಧಾರ್ಮಿಕ ಸಂಸ್ಥೆಗಳ ಹಿತಕ್ಕೆ ಧಕ್ಕೆ ಬರುತ್ತದೆ. ಆದಕಾರಣ ಈ ರೀತಿ ಮಾಡುವುದರಿಂದೇನೂ ಅಂಥ ಒಂದು ಹೆಚ್ಚಿನ ಪ್ರಯೋಜನ ಆಗುವುದಿಲ್ಲವೆಂದು ಆ ಸಮಿತಿಯವರು ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಹಾಗೆ ಈ ಒಂದು ಮೊಬಲಗಿನಿಂದ ಬರತಕ್ಕ ಬಡ್ಡಿಯಿಂದಲೇ ಆ ಸಂಸ್ಥೆಗಳ ಅಂದರೆ ಮಠ, ದೇವಸ್ಥಾನಗಳಲ್ಲಿ ನಿತ್ಯಗಟ್ಟಲೆ ನಡೆಯತಕ್ಕಂಥ ವಿಚಾರಗಳ ಖರ್ಚು ವೆಚ್ಚಗಳನ್ನು ಸರಿತೂಗಿಸಲು ಸಾಧ್ಯವೇ ಅನ್ನುವುದನ್ನೂ ಮಾನ್ಯ ಸದಸ್ಯರು ಗಮನಿಸಬೇಕಾದಂಥ ವಿಚಾರವಾಗಿದೆ. ಆದರೆ ಹೀಗೆ ಸರ್ಕಾರದವರು ಈ ಸಂಸ್ಥೆಗಳಿಗೆ ಏನೊಂದು ತಸ್ತೀಕ್ ಮೊಬಲಗನ್ನು ಕೊಡುತ್ತಾಗುತ್ತದೆಂದು ಹೇಳುತ್ತಿರುತ್ತವೆಯೋ ಆದರ ಬಗ್ಗೆ ಸರ್ಕಾರದಮೇಲೆ ಏನು ಹೊರ ಬೀಳುತ್ತದೆಂಬ ವಿಚಾರವನ್ನೂ ಕೂಡ ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಲಾಗಿದೆ. ಆದರೆ ಇದರಿಂದ ಸರ್ಕಾರದ ಮೇಲೇನೂ ಅಂಥ ಒಂದು ಹೊರೆಬೀಳುವುದಿಲ್ಲ, ಸರ್ಕಾರಕ್ಕೇನೂ ನಷ್ಟವಾಗುವುದಿಲ್ಲವೆಂಬುದಾಗಿ ಕಂಡು ಬಂದಿದೆ. ಅದು ಹೀಗೆ ಎಂದರೆ - ಇಲ್ಲಿಯತನಕ ಈ ಖದೀಂ ರೈತರುಗಳು ಇನಾಂದಾರರುಗಳಿಗೆ ಕೊಡುತ್ತಿದ್ದಂಥ ಏನೊಂದು ಆದಾಯವಿತ್ತೋ ಆ ಆದಾಯ ಇನ್ನುಮುಂದೆ ಸಾರೋದ್ಧಾರವಾಗಿ ಸರ್ಕಾರಕ್ಕೇ ಸಲ್ಲುತ್ತ ಬರುತ್ತದೆ. ಇನ್ನು ಎರಡನೆಯದಾಗಿ ಈ ಪರ್ಮನೆಂಟ್ ರೈತರುಗಳಿಂದ ಮೊಟ್ಟಮೊದಲನೆಯದಾಗಿ ಸರ್ಕಾರಕ್ಕೆ ಕಂದಾಯದ 20 ರಷ್ಟು ಮೊಬಲಗು ಬರುವುದಲ್ಲದೆ--ವರ್ಷಂಪ್ರತಿ ಸರ್ಕಾರಕ್ಕೆ ಬೇರೆ ಆದಾಯ ಸಹ ಅವರಿಂದ ಬರುತ್ತಿರುತ್ತದೆ. ಇನ್ನುಳಿದ ತರಗತಿಯ ರೈತರುಗಳೇನಿದ್ದಾರೋ—ಅಂದರೆ 'ಈ ಟೆನೆಂಟ್ಸ್ ಅಟ್‌ವಿಲ್' ಎನ್ನತಕ್ಕವರುಗಳೆಲ್ಲ, ನಾವೀಗ ಈ ಬಿಲ್ಲಿನಲ್ಲಿ ಸಮಊದಿಸಿರುವ ಪ್ರಕಾರ, ಇವರು ಇನ್ನು ಮುಂದೆ ಸರ್ಕಾರದವರ ಕೈಕೆಳಗೆ ಜಮೀನ್ ಸಾಗುವಳಿ ಮಾಡತಕ್ಕಂಥ ರೈತರುಗಳಾಗುತ್ತಾರೆ, ಆಗ ಇವರು ಸರ್ಕಾರಕ್ಕೆ ಗೇಣಿ ಕೊಡಲು ಸಿದ್ಧರಿರುತ್ತಾರೆ. ಹೀಗೆ ಇದುವರೆಗೂ ಯಾರುಯಾರು ಆ ಧಾರ್ಮಿಕ ಸಂಸ್ಥೆಗಳಿಗೆ ಗೇಣಿ ರೂಪವಾಗಿ ಆದಾಯವನ್ನು ಕೊಡುತ್ತಿದ್ದಾರೋ ಅವರೆಲ್ಲರೂ ಆ ಆದಾಯವನ್ನು ಇನ್ನುಮುಂದಕ್ಕೆ ಸರ್ಕಾರಕ್ಕೇ ಕೊಡುತ್ತಾ ಬರುವುದರಿಂದ ಸರ್ಕಾರಕ್ಕೆ ಈ ತಸ್ತೀಕ್ ಮೊಬಲಗನ್ನು ಕೊಡುವುದರಿಂದ ಏನೂ ನಷ್ಟವಾಗುವುದಿಲ್ಲ. ಆದರೆ ಈ ಗೇಣಿ ಪ್ರಮಾಣವನ್ನೇನಾದರೂ ಕಮ್ಮಿ ಮಾಡಿದರೆ ಆಗ ಇದರಿಂದ ಸ್ವಲ್ಪ ನಷ್ಟವಾದರೂ ಆಗಬಹುದು. ಆದರೆ ಈ ಧಾರ್ಮಿಕ ಸಂಸ್ಥೆಗಳ ಮತ್ತು ಆ ವ್ಯಕ್ತಿ ಸಂಬಂಧವಾದ ಎರಡು ಮಸೂದೆಗಳನ್ನೂ ಒಟ್ಟಾಗಿ ತೆಗೆದುಕೊಂಡು—ಇವುಗಳಿಂದ ಸರ್ಕಾರಕ್ಕೆ ಬರುವಂಥ ಆದಾಯದಮೇಲೆ ಲೆಕ್ಕ ಹಾಕಿ ನೋಡಿದರೆ ಅಂಥ ನಷ್ಟವೇನೂ ಸರ್ಕಾರಕ್ಕೆ ಆಗುವುದಿಲ್ಲವೆಂದೂ ಇದರಿಂದ ಸರ್ಕಾರಕ್ಕೇ ಇನ್ನೂ ಅಷ್ಟಿಷ್ಟು ಉಳಿತಾಯವಾಗುತ್ತದೆ, ಲಾಭಕರವಾಗಿರುತ್ತದೆಂದೂ ಕಂಡುಬಂದಿದೆಯೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಉಳಿದದ್ದು ಅರಣ್ಯ, ಗೋಮಾಳ ಮತ್ತು ಸಾರ್ವಜನಿಕರುಗಳು ಉಪಯೋಗಿಸುತ್ತಿದ್ದಂಥ ಜಮೀನುಗಳೇನಿದ್ದವೋ ಮತ್ತು ಅಂಥ ಜಮೀನುಗಳಿಂದ ಆ ಇನಾಂದಾರರುಗಳಿಗೆ ಯಾವ ಒಂದು ಆದಾಯ ಬರುತ್ತಿತ್ತೋ ಆ ಆದಾಯವೆಲ್ಲವೂ ಇನ್ನು ಮುಂದೆ ಸರ್ಕಾರಕ್ಕೆ ಬರುತ್ತಿರುತ್ತದೆ. ಈ ಎಲ್ಲ ಕಾರಣಗಳಿಂದಲೂ ಈ ಬಾಬಿನಿಂದ ಸರ್ಕಾರಕ್ಕೆ ಯಾವ ನಷ್ಟವೂ ಆಗುವುದಿಲ್ಲ.

ಆದರೆ ಮಾನ್ಯ ಸದಸ್ಯರು ಕೆಲವರು ಈಗ ಸಭೆಯ ಮುಂದೆ ಇಟ್ಟಿರತಕ್ಕಂಥ ಮತ್ತೊಂದು ವಾದವೇನೆಂದರೆ—ಭೂಮಿಯ ಮಾಲೀಕತ್ವವನ್ನು ಈಗ ಖದೀಂ ರೈತರಾಗಿರುವವರಿಗೂ ಮತ್ತು ಪರ್ಮನೆಂಟ್ ರೈತರಾಗಿರತಕ್ಕವರಿಗೂ ಮಾತ್ರ ಕೊಟ್ಟು ಇನ್ನುಳಿದ ಆಸ್ತಿಯ ಭೂಸಾಮ್ಯವನ್ನೆಲ್ಲಾ ಆಯಾ ಧಾರ್ಮಿಕ ಸಂಸ್ಥೆಗಳ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿಬಿಡಿ ಎಂದು ಹೇಳಿದ್ದಾರೆ. ಆದರೆ ಈ ವಾದವನ್ನು ಪ್ಲಾನಿಂಗ್ ಸಮಿತಿಯವರು ಒಪ್ಪಿರುವುದಿಲ್ಲ. ಆದರೆ ಈ ಮಸೂದೆಯಲ್ಲಿ ಅಡಕವಾಗಿರತಕ್ಕ ಉದ್ದೇಶವೇನೆಂದರೆ—ಭೂಮಿಯನ್ನು ಉಳತಕ್ಕಂಥ ರೈತ ಯಾರಿದ್ದಾನೋ- ಅವನಿಗೆ ಸಾಕಷ್ಟು ಭೂಮಿಯ ಹಕ್ಕುಬಾಧ್ಯತೆಗಳನ್ನು ಕೊಡಬೇಕು ಅನ್ನುವುದೇ ಆಗಿದೆ. ಆದುದರಿಂದ ನಾವಿಂದು 'ಆ ಟೆನೆಂಟ್ಸ್ ಅಟ್‌ವಿಲ್' ಎಂಬುದಾಗಿ ಯಾರಿದ್ದಾರೋ ಅಂಥವರಿಗೆ ಈ ಒಂದು ಭೂಸ್ವಾಮ್ಯದ ಹಕ್ಕುಬಾಧ್ಯತೆಯನ್ನು ಒದಗಿಸಿ ಕೊಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಅಂಶವನ್ನು ಪೂರ್ತಿಗೊಳಿಸದೆ ನಾವು ಕೈಬಿಟ್ಟುಬಿಟ್ಟರೆ ಆಗ ಈ ಮಸೂದೆಯ ಪೂರ್ಣ ತತ್ವಗಳನ್ನು ನಾವು ಆಚರಣೆಗೆ ತಂದಹಾಗೆ ಆಗುವುದಿಲ್ಲ. ಇದೇ ಸಂಬಂಧವಾಗಿ ಮತ್ತೆ ಕೆಲವರು ಏನು ಹೇಳಿದ್ದಾರೆಂದರೆ—ಈ ಮಠಗಳ ಮತ್ತು ದೇವಸ್ಥಾನಗಳ

ಜಮೀನುಗಳನ್ನು ವಿಶೇಷವಾಗಿ ಮಧ್ಯವರ್ತಿ ಜನರು ಸಾಗುವಳಿಗೆ ತೆಗೆದುಕೊಂಡು ಅದನ್ನು ಸಾಗುವಳಿ ಮಾಡಲು ಬೇರೆಯವರಿಗೆ ಕೊಟ್ಟಿರುತ್ತಾರೆ ಎಂಬುದಾಗಿ ತಿಳಿಸಿದ್ದಾರೆ. ಹೀಗಾಗಿ ಇದರಿಂದ ಈಗ ಪ್ರಯೋಜನವೆಲ್ಲಾ ಕೇವಲ ಈ ಮಧ್ಯವರ್ತಿ ಜನಗಳಿಗೆ ಸೇರುತ್ತದೆಯೇ ವಿನಾ ನಿಜವಾಗಿಯೂ ಯಾರು ಆ ಜಮೀನಿನಲ್ಲಿ ಇಂದು ಬೇಸಾಯ ಮಾಡುತ್ತಿದ್ದಾರೋ ಅವರಿಗೇನೂ ಸಹಾಯ ಅನುಕೂಲಗಳಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಈಗಿರುವ ಮುಜರಾಯಿ ಆಕ್ಟ್ ಪ್ರಕಾರ ಯಾರು ಜಮೀನನ್ನು ಗೇಣಿಗೆ ಪಡೆಯುಜರಾರೋ ಅಂಥವರೇ ಆ ಜಮೀನನ್ನು ವ್ಯವಸಾಯ ಮಾಡಬೇಕಲ್ಲದೆ—ಅವುಗಳನ್ನು ಬೇರೆಯವರಿಗೆ ಮತ್ತೆ ಗೇಣಿಗೆ ಕೊಡಲು ಅವಕಾಶವಿಲ್ಲ. ಹೀಗೆ ಮುಜ್ರಾಯಿ ಹರಾಜಿನಲ್ಲಿ ಜಮೀನು ಯಾರು ಪಡೆದರೆ ಅವರೇ ಆ ಭೂಮಿಯ ಉಳಮೆ ಮಾಡಬೇಕೆಂಬ ನಿಯಮವಿದೆ. ಇದಕ್ಕೆ ಯಾರಾದರೂ ವಿರೋಧವಾಗಿ ವರ್ತಿಸಿದರೆ ಆಗ ಅವರ ಹಕ್ಕು ನಾಶವಾಗಿ ಹೋಗುತ್ತದೆ. ಅಂಥ ಒಂದು ಕಾನೂನು ಈಗ ಹಾಲಿ ಜಾರಿಯಲ್ಲಿದೆ. ದೇವಸ್ಥಾನಗಳ ಮತ್ತು ಮಠಗಳ ಜಮೀನನ್ನು ಹರಾಜಿನಲ್ಲಿ ಒಬ್ಬ ಗೇಣಿಗೆ ಪಡೆದುಕ್ಕೊಂಡು ಮೂರನೆಯ ಮನುಷ್ಯನಿಗೆ ಆ ಜಮೀನನ್ನು ಗೇಣಿಗೆ ಕೊಟ್ಟ ಪಕ್ಷದಲ್ಲಿ, ಜಿಲ್ಲಾಧಿಕಾರಿಗಳು ಅಂಥ ಸಂದರ್ಭಗಳನ್ನು ಪರಿಶೀಲನೆ ಮಾಡಿ ಆ ಗೇಣಿ ನ್ಯಾಯಬದ್ಧವಾಗಿಲ್ಲ ಎಂದು ತೀರ್ಮಾನ ಮಾಡುವುದಕ್ಕೆ ಅವಕಾಶವಿದೆ.

4-30 P.M.

ಶ್ರೀವರ್ಾ ಗೋಪಾಲಗೌಡರೂ, ಮುಲ್ಕಾ ಗೋವಿಂದರೆಡ್ಡಿಯವರೂ ಇತರ ಕೆಲವು ಮಿತ್ರರೂ 23ನೆಯ ಕ್ಲಾಜಿನಲ್ಲಿ ಗೇಣಿಯನ್ನು ನಿಗದಿ ಮಾಡಿರುವುದು ಜಾಸ್ತಿ ಎಂದು ಹೇಳಿದ್ದಾರೆ. ಇದಕ್ಕೆ ಈಗಾಗಲೇ ಒಂದು ತಿದ್ದುಪಡಿ ಕೂಡ ಸೂಚಿಸಲ್ಪಟ್ಟಿದೆ. ಈ ಮಸೂದೆ ಅನ್ವಯಿಸತಕ್ಕ ಜಮೀನುಗಳಿಗೂ ಮತ್ತು ಸಂಸ್ಥಾನದ ಇತರ ಜಮೀನುಗಳಿಗೂ ಒಂದೇ ರೀತಿ ನಿಯಮವಿರುವುದು ಅಗತ್ಯ. ಆದುದರಿಂದ ಟೆನೆನ್ಸಿ ಕಾನೂನಿನ ಪ್ರಕಾರ ಗೇಣಿಯನ್ನು ನಿಗದಿ ಮಾಡಿದರೆ ಅವರು ಹೇಳುವ ಲೋಪ ನಿವಾರಣೆಯಾಗುತ್ತದೆಂದು ಅರಿಕೆ ಮಾಡುತ್ತೇನೆ.

ಇನ್ನೊಂದಂಶವನ್ನು ಪ್ರಸ್ತಾಪಿಸಿದ್ದಾರೆ. 27ನೆಯ ಕ್ಲಾಜಿನ ಪ್ರಕಾರ, ರೈತರು ತಾವು ಬೇಸಾಯಮಾಡತಕ್ಕ ಭೂಮಿಯ ಮಾಲೀಕತ್ವವನ್ನು ಅಪೇಕ್ಷೆಪಟ್ಟರೆ ಸರ್ಕಾರದವರು ಕೋರಿದಾಗ ಗೇಣಿಗೂ ಕಂದಾಯಕ್ಕೂ ಇರತಕ್ಕ ವ್ಯತ್ಯಾಸದ 33⅓ರಷ್ಟು ಮೊಬಲಗನ್ನು ಕೊಟ್ಟರೆ ಭೂಮಾಲೀಕನಾಗುವುದಕ್ಕೆ ಸಾಧ್ಯವಾಗುತ್ತದೆಂದಿದೆ. ಇದು ಬಹಳ ದುಬಾರಿಯಾಗುತ್ತದೆಂದು ಹೇಳಿದರು. ಈ ವಿಷಯದಲ್ಲಿಯೂ ಮಿತ್ರರು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಇದನ್ನು ಸ್ವಲ್ಪ ಕಡಮೆ ಮಾಡುವುದಕ್ಕೆ ನನ್ನ ಅಡ್ಡಿಯಿಲ್ಲ. ಆದರೆ ಒಂದಂಶವನ್ನು ಗಮನಿಸಬೇಕು. ಕಂದಾಯದ 20ರಷ್ಟು ಮೊಬಲಗನ್ನು ತೆಗೆದುಕೊಂಡು ಜಮೀನನ್ನು ರೈತರಿಗೆ ಕೊಟ್ಟು ಸರ್ಕಾರ ಹೇರಳವಾದ ಹೊರೆಯನ್ನು ಹೊರುವುದು ಸಾಧುವಲ್ಲವೆಂದು ಶ್ರೀವರ್ಾ ಮುಲ್ಕಾ ಗೋವಿಂದರೆಡ್ಡಿಯವರಿಗೂ ಗೋಪಾಲಗೌಡರಿಗೂ ಅರಿಕೆಮಾಡಿಕೊಳ್ಳುತ್ತೇನೆ. ಅವರಿಗೆ ಆದಷ್ಟು ರಿಯಾಯಿತಿ ಕೊಡಬಹುದೇ ಹೊರತು ಹೆಚ್ಚಿನ ರಿಯಾಯಿತಿಯನ್ನು ಕೊಡತಕ್ಕ ಆತುರದಲ್ಲಿ ಸರ್ಕಾರದ ಜವಾಬ್ದಾರಿಯನ್ನು ಹೆಚ್ಚಿಸಬಾರದೆಂದು ನನ್ನ ಮನವಿ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರೂ ಶ್ರೀ ನಾಗರಾಜಮೂರ್ತಿಯವರೂ ಅಪ್ಪಣೆ ಕೊಡಿಸಿದಹಾಗೆ, ಇಂಥ ಒಂದು ಮಸೂದೆಯ ವಿಚಾರದಲ್ಲಿ ಸರ್ವಾನುಮತ ಅಭಿಪ್ರಾಯಕ್ಕೆ ಬರುವುದು ಸಾಧ್ಯವೆ ಎನ್ನುವುದನ್ನು ಮಾನ್ಯ ಸದಸ್ಯರು ಯೋಚಿಸಬೇಕು. ಅನೇಕ ಆಸಕ್ತಿಗಳಿರುವಾಗ ಎಲ್ಲಾ ಆಸಕ್ತಿಗಳಿಗೂ ತೃಪ್ತಿಕರವಾದ ರೀತಿಯಲ್ಲಿ ಮಸೂದೆಯನ್ನು ಮಾಡುವುದು ಸಾಧ್ಯವೆ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಯಾವುದಾದರೂ ಒಂದು ರೂಪದಲ್ಲಿ, ಎಲ್ಲೋ ಒಂದು ಕಡೆ ನಾವು ಒಂದು ತೀರ್ಮಾನಕ್ಕೆ ಬರಲೇಬೇಕೆಂದು ನನ್ನ ವಾದ. ಇದೇ ಅಖೈರು ಮತ್ತು ಸರ್ವಸಮರ್ಪಕವಾದುದು ಎಂದು ವಾದ ಮಾಡುವ ಇಚ್ಛೆ ನನಗಿಲ್ಲ. ಸರ್ವಸಮ್ಮತವಾದ ಯಾವುದಾರೂ ಒಂದು formula ಯಾರಾದರೂ ಕೊಟ್ಟರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ನನ್ನದೇ ಸರಿಯಾದ ಅಭಿಪ್ರಾಯವೆಂದು ವಾದ ಮಾಡುವವನಲ್ಲ ನಾನು. ಕೆಲವು ಮಿತ್ರರು ಈ ಮಸೂದೆಗೆ ಸಂಬಂಧಪಟ್ಟ ಅಂಕಿಅಂಶಗಳನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ಒದಗಿಸಿಲ್ಲವೆಂದು ಹೇಳಿದರು. ಯಾವಯಾವ ಧಾರ್ಮಿಕ ಸಂಸ್ಥೆಗೆ ಎಷ್ಟೆಷ್ಟು ವರಮಾನವಿದೆ ಎಂಬುದನ್ನು ಪಟ್ಟಿಮಾಡಿ ಕೊಡಬೇಕೆಂದು ಕೆಲವರು ಹೇಳಿದರು. ಧಾರ್ಮಿಕ ಸಂಸ್ಥೆಗಳಿಗೆ ಇನಾಂ ಜಮೀನಲ್ಲದೆ ಬೇರೆ ಆಸ್ತಿಗಳೂ ಇವೆ, ಬೇರೆ ರೂಪದಲ್ಲಿಯೂ ವರಮಾನ ಬರುತ್ತದೆಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು. ಒಂದೊಂದು ಊರಿಗೂ ಗ್ರಾಮಕ್ಕೂ ಸಂಸ್ಥೆ ಇದ್ದ ಹಾಗೆ ದೇವಸ್ಥಾನಗಳೂ ಇವೆ. ಈ ಎಲ್ಲ ದೇವಸ್ಥಾನಗಳಿಗೆ ಸಂಬಂಧಪಟ್ಟ ಆದಾಯ ವೆಚ್ಚದ ತಃಖ್ತೆಯನ್ನು ತಯಾರುಮಾಡುವುದಲ್ಲದೆ ಆಷ್ಟೈಕಿ ಇನಾಂ ಜಮೀನುಗಳಿಂದ ಬರತಕ್ಕ ವರಮಾನವೆಷ್ಟು ಎಂಬುದನ್ನು ಕಂಡುಹಿಡಿಯಬೇಕು. ಇದಕ್ಕೆ ಎಷ್ಟು ಸಿಬ್ಬಂದಿ ಮತ್ತು ಕಾಲಹಿಡಿಯುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ನಮ್ಮೂರಿನಲ್ಲಿ ಒಂದು ದೇವಸ್ಥಾನವಿದೆ; ಅದಕ್ಕೆ ಸ್ವಲ್ಪ ಇನಾಂ ಜಮೀನಿದೆ, ಭಕ್ತಾದಿಗಳು ಕಾಣಿಕೆ ಕೊಡುತ್ತಾರೆ; ಅಲ್ಲದೆ ಜಾತ್ರೆಯ ಕಾಲದಲ್ಲಿ ಬೇರೆ ವರಮಾನ ಬರುತ್ತದೆ. ಇದನ್ನೆಲ್ಲಾ ಸೇರಿಸಿ ಹೇಳುವುದು ಸಾಧ್ಯ. ಆದರೆ ಇದರಲ್ಲಿ ಇನಾಂ ಜಮೀನಿನಿಂದ ಎಷ್ಟು ಬರುತ್ತದೆ ಎಂಬುದನ್ನು ಕಂಡುಹಿಡಿಯಬೇಕಾದರೆ ಒಂದೊಂದು ತಾಲ್ಲೂಕಿಗೂ ಇಬ್ಬರು ಗುಮಾಸ್ತರನ್ನಿಟ್ಟು . . . .

ಒಬ್ಬ ಸದಸ್ಯರು.—ಅಮಲ್ದಾರರಿಗೆ ಗೊತ್ತಿರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಧಾರ್ಮಿಕ ಸಂಸ್ಥೆಗೆ ಸಂಬಂಧಪಟ್ಟ ಇನಾಂ ಜಮೀನಿನಿಂದಲೂ ಬರುವ ವರಮಾನವನ್ನು ಖರಾರುವಾಕಾಗಿ ಹೇಳಲು ಸಾಧ್ಯವಿಲ್ಲ ಲೆಕ್ಕವಿರುತ್ತದೆ; ಒಟ್ಟು ವರಮಾನವೆಷ್ಟು ಬರುತ್ತದೆಂಬುದಾಗಿ ಗೊತ್ತಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಯಾವ ಜಮೀನೆಷ್ಟಿದೆ ಎಂಬುದನ್ನು ಹೇಳುವುದು ಸುಲಭ. ಬಾಕಿ ಎಲ್ಲ ವರಮಾನಗಳನ್ನು ತಿಳಿದುಕೊಳ್ಳುವುದು ಕಷ್ಟವಾದರೂ ಜಮೀನು ಗುತ್ತಿಗೆ ಎಷ್ಟು ಬರುತ್ತದೆಂಬುದನ್ನು ಕಂಡುಹಿಡಿಯುವುದು ಕಷ್ಟವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಾವು ಪ್ರಯತ್ನ ಮಾಡಿದ್ದೇವೆ, ಅದು ಅಷ್ಟು ಸುಲಭಸಾಧ್ಯವಲ್ಲ.

ಇನ್ನು ನಮ್ಮ ಮಿತ್ರರು ದೇವಾಲಯವೆಷ್ಟು ದೇವಾದಾಯವೆಷ್ಟು ಧರ್ಮಾದಾಯ ಜಮೀನೆಷ್ಟು ಎಂದು ಕೇಳಿದರು. ಅದನ್ನು ತಿಳಿಸುತ್ತೇನೆ.

(ಶ್ರೀ ಕಡಿದಾಳ್ ಮಂಜಪ್ಪ.)

		ಎಕರೆಗಳು
Whole villages	ದೇವಾದಾಯ ...	98,704
Do	ಧರ್ಮಾದಾಯ ...	4,984
ಮಿಕ್ಕ ಇನಾಂನಲ್ಲಿ	ದೇವಾದಾಯ ...	1,84,024
Do	ಧರ್ಮಾದಾಯ ...	24,078

ಇದು ಸ್ವಲ್ಪ ಹೆಚ್ಚುಕಡಮೆ ಇರಬಹುದು. ಇದು ಖರಾರು ಹಾಗಾಗಿದೆ ಎಂದು ನಾನು ಹೇಳಲಾರೆ. ಈಪ್ಪೈಕಿ ಸುಮಾರು ಒಂದುಲಕ್ಷ ಎಕರೆಯಷ್ಟು ಗೋಮಾಳ ಅರಣ್ಯ ಮುಂತಾದ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕವಾಗಿರತಕ್ಕ ಜಮೀನು ಸೇರಿರಬಹುದು.

ಇಷ್ಟು ಹೇಳಿ, ಈ ಮಸೂದೆಗೆ ಸಾಮಾನ್ಯವಾಗಿ ಸಂಪೂರ್ಣ ಬೆಂಬಲ ದೊರೆತಿದೆಯೆಂದು ಹೇಳಬಹುದು. ಅಲ್ಲಲ್ಲಿ ಕೆಲವರು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಯಾವ ಭಗವಂತನು ನಮ್ಮೆಲ್ಲರನ್ನೂ ಈ ಮಸೂದೆಯನ್ನು ತರುವುದಕ್ಕೆ ಪ್ರೇರೇಪಿಸಿದನೋ ಅವನೇ ನಾಳೆ ನಾವೆಲ್ಲರೂ ಒಗ್ಗಟ್ಟಾಗಿ ವರ್ತಿಸುವುದಕ್ಕೂ ಬುದ್ಧಿ ಕೊಡುತ್ತಾನೆಂಬ ಸಂಪೂರ್ಣ ಭರವಸೆಯಿಂದಿದ್ದೇನೆ. ಆದುದರಿಂದ ಈ ಮಸೂದೆ ಜಾಗ್ರತೆಯಾಗಿ ಕಾನೂನಾಗುವ ರೀತಿ ಸಹಕಾರ ನನಗೆ ದೊರೆಯುವಂತೆ ಪರಮಾತ್ಮನು ತಮ್ಮನ್ನೆಲ್ಲಾ ಪ್ರೇರೇಪಿಸಲೆಂದು ನಾನು ಪ್ರಾರ್ಥಿಸುತ್ತೇನೆ.

Mr. SPEAKER.—I want to know from the Hon'ble Minister whether he is able to furnish the financial implications of this Bill which has been altered by amending some of the important clauses.

Sri Kadidal MANJAPPA.—I have submitted, Sir, that as the Bill at present stands, there is no extra commitment to be borne by the State. As I have already submitted, the rent that the kadim tenant was paying hitherto to the inamdar will be paid to the Government. The permanent tenant pays not only the assessment due to Government, but also the premium calculated at the rate of twenty times the land revenue. The other tenants who are called tenants-at-will usually pay rent to the Government. Whatever income the inamdar was deriving from the forest and the other communal lands, Government will continue to get hereafter. Therefore, as the Bill at present stands, there is no commitment on the part of the State. I cannot calculate exactly the amount to be paid to these religious institutions.

Sri A. BHEEMAPPA NAIK.—What will be the annual tasdik allowance that will have to be paid by the Government? That the Government does not know. What the Government is going to get by way of premiums, the Government does not know. What the Government is going to derive as rents, they do not know. Not knowing these, simply telling that the amount to be paid as tasdik allowance may not be more is not a correct statement to come from an authoritative source like the Minister.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಖಂಡಿತವಾಗಿ ಹೇಳಿದ್ದೇನೆ. ಖದೀಮ್‌ರೈತರಿಂದ ಇದುವರೆಗೆ ಯಾವ ವರಮಾನ ಆಯಾ ಸಂಸ್ಥೆಗಳಿಗೆ ಬರುತ್ತದೆಯೋ ಅದೇ ವರಮಾನ ಮುಂದೆ ಸರ್ಕಾರಕ್ಕೆ ಬರುತ್ತದೆ. ಖಾಯಂ ರೈತರಿಂದ ಕಂದಾಯ ಇನ್ನುಮೇಲೆ ಸರ್ಕಾರಕ್ಕೆ ಬರುತ್ತದೆಯಲ್ಲದೆ ಇದರ ಜೊತೆಗೆ ಪ್ರೀಮಿಯಮ್ ಮೊಬಲಗೂ ಸರ್ಕಾರಕ್ಕೆ ಬರುತ್ತದೆ. ಅರಣ್ಯ ಮುಂತಾದ ಜಮೀನಿನಿಂದ ಇದುವರೆಗೆ ಇನಾಮ್‌ದಾರರಿಗೆ ಬರುತ್ತಿದ್ದ ವರಮಾನ ಮುಂದೆ ಸರ್ಕಾರಕ್ಕೆ ಬರುತ್ತದೆ. ಉಳಿದ ರೈತರಿಂದ ಇನಾಮ್‌ದಾರರಿಗೆ ಯಾವಗೇಣಿ ಸಲ್ಲುತ್ತಿದೆಯೋ ಅದು ಮುಂದೆ ಸರ್ಕಾರಕ್ಕೆ ಬರುತ್ತದೆ. ಆದುದರಿಂದ ಸರ್ಕಾರಕ್ಕೆ ಹೆಚ್ಚಿನ 'ಕಮಿಟ್‌ಮೆಂಟಿಲ್ಲ' ವೆಂದು ಹೇಳಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸರ್ಕಾರ ಕೊಡಬೇಕಾದುದೆಷ್ಟು ?

ಶ್ರೀ ಎ. ಭೀಮಪ್ಪನಾಯಕ್.—ಒಂದೆಕರೆಗೆ ಒಂದು ರೂಪಾಯಿ ಕಂದಾಯ ಕೊಟ್ಟರೆ ಅದರ 20 ರಷ್ಟು ಕೊಟ್ಟರೆ ನಿಮಗೆ ಬರುತ್ತದೆ, ಎಂದರೆ 20 ವರ್ಷದ ಕಂದಾಯ. ಮುಂದೆ ಸಂಸ್ಥೆಗೆ ಬರುವುದು-ಗುತ್ತಿಗೆ ಸಾಮಾನ್ಯವಾಗಿ 20 ಪಲ್ಲ ಇದ್ದರೆ $20 \times 8 = 160$ ರೂಪಾಯಿ ಆದರೆ, ಸಂಸ್ಥೆಗೆ 160 ರೂಪಾಯಿ ಹೋಗಬೇಕು. ಆದರೆ ಅತನಿಂದ ಬಂದಿರುವುದು 20 ರೂಪಾಯಿ ಮಾತ್ರ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಖಾಯಂ ರೈತರ ವಿಚಾರ ಮಾತ್ರ ಮಾತನಾಡುತ್ತೀರೆಂದು ಕಾಣುತ್ತದೆ. ಇವರ ಸಂಖ್ಯೆ ಬಹಳ ಕಡಮೆ. ಅವರ ಪೈಕಿ ಬಹಳ ಮಂದಿ ಬರಿಯ ಕಂದಾಯ ಮಾತ್ರ ಕೊಡುತ್ತಾರೆ. ನಾನು ಹೇಳಿದಾಗ ತಾವು ಸಭೆಯಲ್ಲಿರಲಿಲ್ಲ. ಮುಜರಾಯಿ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನಿನ ಸಾಗುವಳಿ ಮಾಡತಕ್ಕವರ ಪೈಕಿ ಪರ್ಮನೆಂಟ್ ಟೆನೆಂಟ್‌ಗಳ ಸಂಖ್ಯೆ ಬಹಳ ಕಡಮೆ, ಏಕೆಂದರೆ, ಈಗಿರತಕ್ಕ ಮುಜರಾಯಿ ಕಾನೂನಿನ ಪ್ರಕಾರ ಐದು ವರ್ಷಗಳಿಗಿಂತ ಹೆಚ್ಚು ಅವದಿಗೆ ಸಾಗುವಳಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಇವರ ಸಂಖ್ಯೆ ಬಹಳ ಕಡಿಮೆ. ಹಲವು ಭೂಸುಧಾರಣೆಗೆ ಸಂಬಂಧಪಟ್ಟ ಕಾನೂನುಗಳನ್ನು ಒಟ್ಟಾಗಿ ಪರಿಶೀಲಿಸಿದರೆ, ವ್ಯಕ್ತಿಗಳಿಗೆ ಸಂಬಂಧಪಟ್ಟ ಮಸೂದಾ ಕಾನೂನೊಂದು ಇದೊಂದು, ಇವೆರಡನ್ನೂ ಸೇರಿಸಿದರೆ, ಸರ್ಕಾರಕ್ಕೆ ಖಂಡಿತವಾಗಿಯೂ ಏನೂ ನಷ್ಟವಾಗುವುದಿಲ್ಲವೆಂದು ಅರಿಕೆ ಮಾಡುತ್ತೇನೆ.

ಇನ್ನೊಂದು, annual tasdik allowance ಎಷ್ಟು ಕೊಡಬೇಕಾಗುತ್ತದೆಂದು ಕೇಳಿದರು. ನಾವು ಸರಾಸರಿ ಕಂಡುಹಿಡಿಯಬೇಕು, ಕಳೆದ 5 ವರ್ಷಗಳ ಲೆಕ್ಕದ ಆಧಾರದಮೇಲೆ. ಆಯಾ ಸಂಸ್ಥೆಗೆ ಸಂಬಂಧಪಟ್ಟ ಇನಾಮ್ ಜಮೀನಿನಿಂದ ಐದು ವರ್ಷದ ಲೆಕ್ಕಾಚಾರ ಹಾಕಿ ತಮ್ಮ ಮುಂದೆ ಇಡಬೇಕಾದರೆ ಎಷ್ಟು ಕಷ್ಟವಾಗುತ್ತದೆಂದು ಯೋಚನೆ ಮಾಡಬೇಕು.

ಶ್ರೀ ಎಸ್. ಗೋಪಾಲಗೌಡ.—ಬರುತ್ತಾ ಇದ್ದಂಥ ಉತ್ಪತ್ತಿಯ 33 1/3 ರಷ್ಟನ್ನು ಕೊಟ್ಟರೆ, ಅವನಿಗೆ

ಜಮೀನು ಕೊಡುತ್ತಾರೆ. ಕಂದಾಯವನ್ನು ಉತ್ಪತ್ತಿಗೆ ಹೋಲಿಸಿದರೆ ಬಹಳ ಕಡಿಮೆ. ನಾವು Basic annual sum ಅನ್ನೇ compete ಮಾಡುವಾಗ ಉತ್ಪತ್ತಿಯನ್ನು ಲೆಖ್ಖಹಾಕಿಕೊಂಡರೆ ಅಲ್ಲಿಗೆ ಸ್ವಲ್ಪ ಹೆಚ್ಚು ಕಡಿಮೆ 33 ವರುಷ ನಾವು ತಸ್ತೀಕ್ ಕೊಟ್ಟರೆ ಆತನು ಕೊಟ್ಟಿರುವ ದುಡ್ಡು ಅಲ್ಲಿಗೆ ಮುಕ್ತಾಯ ವಾಗುತ್ತದೆ. ಆ ಮೇಲೆ ನಿಮಗೆ ಬರುವುದು ಒಂದು ರೂಪಾಯಿ, ಆದರೆ ನಾವು ಆ ಸಂಸ್ಥೆಗೆ ತಲತಲಾಂತರದವರೆಗೆ ದುಡ್ಡು ಕೊಟ್ಟುಕೊಂಡು ಹೋಗಬೇಕು. ಇದಕ್ಕೆ ಏನು ಹೇಳೋಣವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ನಿಬಂಧನೆಗಳನ್ನು ಸೇರಿಸುವಾಗ ನಾನು ಆಲೋಚನೆ ಮಾಡಿರಲಿಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳುವುದರಲ್ಲಿ ಬಹಳ ಅರ್ಥವಿದೆ 33 1/3 ಭಾಗದಷ್ಟು ಹಣ ಕೊಟ್ಟುಕೊಂಡುಕೊಂಡರೆ ಏನಾಗುತ್ತದೆಂಬುದನ್ನು ಹೇಳುತ್ತೇನೆ, ನಾನು ರೈತನ ಮಗ. ಅವರು ರೈತರು, ನಾನು ಉದಾಹರಣೆ ಕೊಡುತ್ತೇನೆ, ಮೈದಾನ ಪ್ರದೇಶದಲ್ಲಿ ಒಂದು ಎಕರೆ ಖುಷ್ಕಿ ಜಮೀನಿಗೆ ವಾರ ಅಥವಾ ಗುತ್ತಿಗೆ ರೂಪದಲ್ಲಿ ಒಂದು ಪಲ್ಲ ರಾಗಿ ಅಥವ ಜೋಳ ಬರುತ್ತದೆಂದು ಭಾವಿಸೋಣ. ಆಗ ಅದರಿಂದ 20 ರೂಪಾಯಿಗಳು ಬರುತ್ತದೆ. ಅದರಲ್ಲಿ ಎರಡು ರೂಪಾಯಿ ಕಂದಾಯ ತೆಗೆಯಿರಿ; ಉಳಿದ 18 ರೂಪಾಯನ್ನು 33 ರಿಂದ ಗುಣಿಸಿ. ಆಗ್ಗೆ ಎಕರೆ ಒಂದಕ್ಕೆ 600 ರೂಪಾಯಿ ಕರೀದಿ, ರೈತ ಕೊಡಬೇಕಾಗುತ್ತದೆ. ಅದಕ್ಕೆ 4 ರೂಪಾಯಿ ಬಡ್ಡಿಹಾಕಿ. ಆಗ್ಗೆ 24 ರೂಪಾಯಿ ಬಡ್ಡಿ ಬರುತ್ತದೆ; ಆದರೆ ತಸ್ತೀಕು Allowance ಕೊಡಬೇಕಾದ್ದು 18 ರೂಪಾಯಿ ಮಾತ್ರ. ಸರ್ಕಾರದವರಿಗೆ ಕಂದಾಯ ಬೇರೆ ಬರುತ್ತದೆ. ಆದ್ದರಿಂದ ಶ್ರೀ ಗೋಪಾಲಗೌಡರು ಹೇಳುವುದರಲ್ಲಿ ಅರ್ಥವಿದೆ.

ಶ್ರೀ ಎಚ್. ಎಮ್. ಚನ್ನಬಸಪ್ಪ.—ತಾವು ಹೇಳುವುದನ್ನು ಒಪ್ಪಿಕೊಳ್ಳುವುದಾದರೆ 26 ರೂಪಾಯಿಗಳ ಪ್ರಕಾರ 33 ವರ್ಷ ಕೊಟ್ಟುಕೊಂಡು ಹೋದಮೇಲೆ, ಆ ಮೇಲೆ ಸರ್ಕಾರದವರು ಕಟ್ಟಿಕೊಟ್ಟು ಕೊಂಡು ಹೋಗಬೇಕಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ನಿಮಗೆ ಲೆಖ್ಖಾಚಾರ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—Collection charges ವಜಾಮಾಡಿದ್ದೀರಾ ?

Mr. SPEAKER.—According to Rule 50, a Bill involving expenditure shall be accompanied by a financial memorandum which shall invite particular attention to the clauses relating thereto and shall also give an estimate of the recurring and non-recurring expenditure involved in case the Bill is passed into law. Of course in the original Bill such a financial memorandum is attached. In that it is stated that the additional income in the shape of assessment to Government after the abolition of these inams will be three lakhs of rupees. I want to know whether under the clauses as amended in the Select Committee the Government are going to get Rs. 3 lakhs as originally stated in the financial memorandum.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅಡಿಷನಲ್ income ಎಷ್ಟು ಬರುತ್ತದೆ ಎಂದು ಹೇಳುವುದಕ್ಕೆ ನನಗೆ ಸಾಧ್ಯವಿಲ್ಲ. ಸರ್ಕಾರಕ್ಕೆ ಖರ್ಚು ಬೀಳುವುದಿಲ್ಲ, ಅಲ್ಲಗಲ್ಲಿಗೆ ಸರಿಹೋಗುತ್ತದೆಂದು ಹೇಳುತ್ತಿದ್ದಾರೆ.

Mr. SPEAKER.—I cannot understand so many people rising and asking questions. Only one Hon'ble Member can ask for information at a time.

ಶ್ರೀ ಕೆ. ಪುಟ್ಟಸ್ವಾಮಿ.—ಮೊದಲು ಈ ಮಸೂದೆಯನ್ನು ಮಂಡಿಸಿದಾಗ ಅವರು ಒಂದು ಅರಿಕೆಯನ್ನು ಕೊಟ್ಟಿದ್ದರು. ಅದೇ ರೀತಿ ಈ ಬಿಲ್ಲನ್ನು ಬದಲಾಯಿಸಿದಮೇಲೆ ನಮಗೆ ಏನು ಆದಾಯ ಬರುತ್ತದೆಂದು ಹೇಳಬೇಕು. ಹೆಚ್ಚಿಗೆ ನಮಗೆ ಕೈ ಕಚ್ಚುವುದಿಲ್ಲವೆಂದು ಹೇಳಿದರೆ ಸಾಲದು.

ಶ್ರೀ ಕಡಿದಾಳ್ ಮಂಜಪ್ಪ.—ಇದು ಸ್ಪಷ್ಟವಾಗಿ ನಿಬಂಧನೆಗಳ ಮೂಲಕ ಗೊತ್ತಾಗುತ್ತದೆ. ನಮಗೆ ಬರತಕ್ಕ ಉತ್ಪತ್ತಿ ಏನೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. Permanent tenant ಗಳಿಂದ ಮಾತ್ರ ನಮಗೆ ಬರುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮೊದಲು ಮಸೂದೆ ಬಂದಾಗ ಈ ವಿಚಾರ ಹೇಳುವುದು ಎಷ್ಟು ಅಗತ್ಯವೋ ಅಷ್ಟೇ ಅಗತ್ಯ ಈಗಲೂ ಇದೆ. ಕಾನೂನಿನಲ್ಲಿ ಈ ವಿಷಯ ಸ್ಪಷ್ಟವಾಗಿದೆ, ಅದರ ಪ್ರಕಾರ ಹಾಗೆ ನಮಗೆ ಕೈ ಕಚ್ಚುವುದಿಲ್ಲ ಎನ್ನುವುದನ್ನು ಅಂಕಿಗಳ ಮೂಲಕ ತಿಳಿಸಬೇಕು. ಸದಸ್ಯರು ಮಂತ್ರಿಗಳು ಹೇಳುವುದನ್ನು ನಂಬಬೇಕೆಂದರೆ ಅದು ರೂಲ್ಸ್ ಪ್ರಕಾರ ಸರಿಯಾಗಿರುವುದಿಲ್ಲ.

ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್.—ಈ ಮಸೂದೆಯಲ್ಲಿಯೇ ಸ್ಪಷ್ಟವಾಗಿ ಗೊತ್ತಾಗುತ್ತದೆ, ಬೇರೆ ಲೆಖ್ಖವನ್ನು ಸರ್ಕಾರದವರು ಕೊಡಬೇಕಾಗಿಲ್ಲವೆಂದು ನನ್ನ ಭಾವನೆ. ತಸ್ತೀಕು allowance ಕೊಡಬೇಕಾದರೆ basic valueನ ಮೇಲೆ ಕೊಡುತ್ತಾರೆ. Basic value ಕಂಡು ಹಿಡಿಯುವಾಗ ಯಾವ ಯಾವ ಸಂಸ್ಥೆಗೆ ಏನೇನು ವರಮಾನ ಬರುತ್ತದೆ, ಕಂದಾಯ ವಸೂಲಿಗೆ ಏನು ಖರ್ಚಾಗುತ್ತದೆ, ಕೆರೆ ರಿಪೇರಿಗೆ ಏನು ಖರ್ಚಾಗುತ್ತದೆ ಎಂಬುದನ್ನೆಲ್ಲಾ ಕಳೆದುಬಿಟ್ಟು ಉಳಿದುದನ್ನು ಕೊಡುತ್ತಾರೆ, ಇನ್ನೇನೂ ಹೆಚ್ಚಿಗೆ ಕೊಡುವುದಿಲ್ಲ. ಯಾವುದಾದರೂ ಒಂದು ಸಂಸ್ಥೆಗೆ ಇನಾಂ ಗ್ರಾಮ ಇದೆ ಎಂದು ಇಟ್ಟುಕೊಳ್ಳೋಣ. ಆ ಗ್ರಾಮದಲ್ಲಿ ಕದೀಂ ಟೆನೆಂಟುಗಳು ಪರ್ಮನೆಂಟ್ ಟೆನೆಂಟುಗಳು, ಮತ್ತು Tenants-at-willಗಳೂ ಇರುತ್ತಾರೆ. ಈ ಮೂರು ತರಹ ಜನಗಳಿಂದಲೂ ಸಂಸ್ಥೆಗೆ ವರಮಾನ ಬರುತ್ತದೆ. ಹೀಗೆ ಬಂದ ವರಮಾನದಿಂದ ಸಂಸ್ಥೆ ನಡೆಸುತ್ತಿರುತ್ತಾರೆ. ಸರ್ಕಾರದವರಾದರೂ ಮಾಡುವುದೇನೆಂದರೆ, ಸಂಸ್ಥೆಯವರು ಈ ವರಮಾನವನ್ನು ತೆಗೆದುಕೊಳ್ಳಬೇಕಾಗಿಲ್ಲ. ಸಂಸ್ಥೆಯು ಒಂದು ಮಧ್ಯವರ್ತಿಯಾಗಿರಬೇಕಾಗಿಲ್ಲ, ಆ ಸಂಸ್ಥೆಯು ಬದಲು ನೇರವಾಗಿ ಸರ್ಕಾರಕ್ಕೆ ಬರಲಿ ಎಂಬುದು. ಸರ್ಕಾರದವರ ಕೈಯಿಂದ ಒಂದಾಣೆಯೂ ಖರ್ಚಾಗುವುದಿಲ್ಲ. ಸಂಸ್ಥೆಯು ಯಜಮಾನನೇ ಇದ್ದಾಗ ಹೇಗೆ ಸಂಸ್ಥೆ ನಡೆದುಕೊಂಡು ಹೋಗುತ್ತಿತ್ತೋ ಅದಕ್ಕೂ ಸ್ವಲ್ಪ ಕಡಮೆ ದುಡ್ಡನ್ನು ಸರ್ಕಾರದವರು ಕೊಡುತ್ತಾರೆ. ಸರ್ಕಾರಕ್ಕೆ ಕೊಡುವ quit rentನ್ನು ವಜಾ ಮಾಡಿ ಕಂದಾಯವನ್ನು ವಜಾ ಮಾಡಿಕೊಂಡು ಕೆರೆ ರಿಪೇರಿಗೆ ಬೇಕಾದ ಹಣವನ್ನು ವಜಾ ಮಾಡಿ

(ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್).

ಕೊಂಡು, ಉಳಿದ ದುಡ್ಡನ್ನು ಕೊಡುವುದರಿಂದ, ಸರ್ಕಾರದ ಕೈಯಿಂದ ಯಾವ ಹಣವೂ ಹೋಗುವುದಿಲ್ಲ. ಆದ್ದರಿಂದ ಈಗ ಇರುವಲೆಖ್ಖವೇ ಸ್ಪಷ್ಟವಾಗಿದೆ.

ಎರಡನೆಯದಾಗಿ ಶ್ರೀಮಾನ್ ಚನ್ನಬಸಪ್ಪನವರು "Tenants-at-will 33 1/3 ಭಾಗದಷ್ಟು ಹಣ ಕೊಟ್ಟರೆ ಮಾಲೀಕರಾಗುತ್ತಾರೆ, ಅದರಿಂದ ಸಂಸ್ಥೆಗೆ ಗುತ್ತಿಗೆ ಬರುವುದಿಲ್ಲ. ಕಂದಾಯ ಎಷ್ಟೋ ಅಷ್ಟು ಮಾತ್ರ ಬರುತ್ತದೆ," ಎಂದು ಹೇಳಿದರು. ಅದು ನಿಜ. 33 ವರುಷಗಳವರೆಗೆ ಇಟ್ಟುಕೊಂಡು ಹೋಗಬಹುದು. ಮುಂದಕ್ಕೆ ಇಟ್ಟುಕೊಂಡು ಹೋಗುವುದಕ್ಕಾಗುವುದಿಲ್ಲ. ಅದು ನಿಜ. Permanent Tenantಗಳು ಇವೊತ್ತು ಸಂಸ್ಥೆಗೆ ಕೊಡುವುದು ಕಂದಾಯ ಮಾತ್ರ. ನಾಳೆ ಈ ಜಮೀನು ಸರ್ಕಾರದ ಕೈಗೆ ಬಂದಮೇಲೆ, ಸಂಸ್ಥೆಯ ಮಾಲೀಕತ್ವ ಹೋಗಿ ಅವರು ಕಂದಾಯದ 20ರಷ್ಟು ಹಣಕೊಟ್ಟು ಮುಂದೆ ಕಂದಾಯ ಕೊಟ್ಟುಕೊಂಡು ಹೋಗುತ್ತಾರೆ. ಆದ್ದರಿಂದ ಹೀಗೆ ಬಂದ 331/3 ಭಾಗದ್ದ ಹಣವನ್ನು ಸರ್ಕಾರದವರು ಬೇರೆ ಕಡೆ invest ಮಾಡಿದರೆ, ಅದರಿಂದ ಬೇಕಾದಷ್ಟು ವರಮಾನ ಬಂದು ಸರ್ಕಾರಕ್ಕೆ ಒಂದು ಆಣೆಯೂ ಖರ್ಚಾಗುವುದಿಲ್ಲ.

Mr. SPEAKER.—I am not concerned whether the Government are going to incur additional expenditure or profit. But under the provisions of both the Constitution and our Rules of Procedure, if any financial Bill is to be supported by the House, it must be given correct data or some rough data so that it may be in a position to give its support. It does not matter even if additional expenditure is incurred from the exchequer. But the House must know it and the Members must be in a position to know while giving their support what the financial implication of any financial Bill will be. Therefore, so far as I am concerned, I want to know, before the House is asked to give its support, whether it is possible for the Government to give at least a rough idea of the financial implications so far as this amended Bill is concerned, because there is also one clause as I can see which you have amended at the Select Committee wherein it is stated that the permanent tenant by paying a certain sum can get absolute rights over the land. But it is stated in the original schedule that the multiple varies from 15 to 50 times. Now you have definitely fixed it at 20 times the revenue he pays to the Government. Therefore, I want to know whether this will tangibly alter the financial position of the Bill from what is set out in the Memorandum annexed to the original Bill.

Sri Kadidal MANJAPPA.—I can give a rough estimate of income and expenditure and we can take it up tomorrow.

Mr. SPEAKER.—Now, the House will rise for the day and meet at Twelve of the Clock tomorrow.

The House adjourned at Five of the Clock to meet again at Twelve of the Clock on Friday, the 25th February 1955.

WD 4508—GPB—550—23-3-55